ಏಪ್ರಿಲ್-ಜೂನ್ 2026

ಸಂಪುಟ : 8 ಸಂಚಿಕೆ : 2

# ಕೃಷಿವನ

ತ್ರೈಮಾಸಿಕ ವಾರ್ತಾಪತ್ರ

ಖಾಸಗಿ ಪ್ರಸಾರಕ್ಕಾಗಿ

IAFT Bengaluru



ಶ್ರೀ ಹೆಚ್.ಪಿ. ಮೋಹನ್ ರವರ ಕೃಷಿಅರಣ್ಯ ತೋಟ. (ನೀಲಗಿರಿ+ಮೆಣಸು+ಕಾಫಿ)- ಹೆಮ್ಮಿಗೆ, ಆಲೂರು ತಾಲೂಕು, ಹಾಸನ ಜಿಲ್ಲೆ

# ಪದ್ಮಶ್ರೀ ಡಾ. ಎಸ್.ಜಿ. ಸುಶೀಲಮ್ಮ

ಡಾ. ಎಸ್.ಜಿ. ಸುಶೀಲಮ್ಮ ಅವರು ಖ್ಯಾತ ಸಮಾಜಸೇವಕಿ ಹಾಗೂ ಬೆಂಗಳೂರಿನ ಸುಮಂಗಲಿ ಸೇವಾ ಆಶ್ರಮದ ಸ್ಥಾಪಕ–ಅಧ್ಯಕ್ಷರಾಗಿದ್ದಾರೆ. ಐದು ದಶಕಗಳಿಗಿಂತಲೂ ಹೆಚ್ಚು ಕಾಲ ಅವರು ಅನಾಥ ಮಕ್ಕಳು, ಸಂಕಷ್ಟದಲ್ಲಿರುವ ಮಹಿಳೆಯರು, ಆದಿವಾಸಿಗಳು ಹಾಗೂ ನಗರ ಬಡವರ ಸೇವೆಗೆ ತಮ್ಮ ಜೀವನವನ್ನು ಸಮರ್ಪಿಸಿದ್ದಾರೆ. ಪ್ರೀತಿಯಿಂದ "ಅಮ್ಮ" ಎಂದು ಕರೆಯಲ್ಪಡುವ ಅವರು ಕರ್ನಾಟಕದ ಅತ್ಯಂತ ಹಳೆಯ ಸಮಗ್ರ ಜನಕಲ್ಯಾಣ ಸಂಸ್ಥೆಗಳಲ್ಲಿ ಒಂದನ್ನು ನಿರ್ಮಿಸಿ, ಆಶ್ರಯ, ಶಿಕ್ಷಣ, ಆರೋಗ್ಯ ಸೇವೆ, ಜೀವನೋಪಾಯ ತರಬೇತಿ ಮತ್ತು ಪುನರ್ವಸತಿ ಸೇವೆಗಳನ್ನು ಒದಗಿಸಿದ್ದಾರೆ. ಅವರ ಆಳವಾದ ಕರುಣೆ, ನಿಸ್ವಾರ್ಥ ಸೇವೆ ಮತ್ತು ಮಾನವೀಯತೆಗಾಗಿ ಅವರು ಪ್ರಸಿದ್ಧರಾಗಿದ್ದಾರೆ.

1939ರ ಮೇ 24ರಂದು ಕರ್ನಾಟಕದಲ್ಲಿ ಜನಿಸಿದ ಡಾ. ಎಸ್.ಜಿ. ಸುಶೀಲಮ್ಮ ಅವರು ಸಮಾಜಸೇವೆಗೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಳ್ಳಲು ಉದ್ಯೋಗವನ್ನು ತೊರೆದು ಸೇವಾ ಕಾರ್ಯ ಆರಂಭಿಸಿದರು. 1975ರಲ್ಲಿ ಅವರು ದುರ್ಬಲ ಮತ್ತು ವಂಚಿತ ವರ್ಗದವರಿಗೆ ದೀರ್ಘಕಾಲಿಕ ಬೆಂಬಲ ಒದಗಿಸುವ ಉದ್ದೇಶದಿಂದ ಸುಮಂಗಲಿ ಸೇವಾ ಆಶ್ರಮವನ್ನು ಸ್ಥಾಪಿಸಿದರು. ಸೀಮಿತ ಸಂಪನ್ಮೂಲಗಳಿಂದ ಆರಂಭವಾದ ಈ ಸಂಸ್ಥೆಯನ್ನು ಅವರು ಸಮುದಾಯದ ಸಹಭಾಗಿತ್ವ ಮತ್ತು ವೈಯಕ್ತಿಕ ಸಮರ್ಪಣೆಯ ಮೂಲಕ ಬೆಳೆಸಿದರು. ಅವರ ನೇತೃತ್ವದಲ್ಲಿ ಆಶ್ರಮವು ಅನೇಕ ಕಲ್ಯಾಣ ಯೋಜನೆಗಳನ್ನು ಸ್ಥಾಪಿಸಿದೆ. ಅವುಗಳಲ್ಲಿ: ಪ್ರೇಮಾನಂದ ಮಕ್ಕಳ ಕುಟೀರ, ಅನಾಥ ಮತ್ತು ತ್ಯಜಿಸಲ್ಪಟ್ಟ ಮಕ್ಕಳ ವಸತಿ ಗೃಹ, ಬಸವಾನಂದ ಹೈಸ್ಕೂಲ್, ಸುಮಂಗಲಿ ಸೇವಾ ಆಶ್ರಮ ಬಾಲಕಿಯರ ಪ್ರೌಢಶಾಲೆ, ಕನ್ನಮಣಿ ಕಿಂಡರ್‌ಗಾರ್ಡನ್, ಬಡ ಮಕ್ಕಳಿಗೆ ಉಚಿತ ಶಿಕ್ಷಣ, ಸಂಕಷ್ಟದಲ್ಲಿರುವ ಮಹಿಳೆಯರಿಗಾಗಿ ಅಲ್ಪಾವಧಿ ಆಶ್ರಯ ಗೃಹ, ಪುಣ್ಯಕೋಟಿ ವನಪ್ರಸ್ಥಾಶ್ರಮ, ವೃದ್ಧರ ಆರೈಕೆ ಕೇಂದ್ರ, ನಗರ ಬಡವರಿಗಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ, ಉಚಿತ ಬಹುಚಿಕಿತ್ಸಾ ಆರೋಗ್ಯ ಸೇವೆ ಮತ್ತು ಮಾನಸಿಕ ಆರೋಗ್ಯ ಬೆಂಬಲ. ಈ ಯೋಜನೆಗಳ ಮೂಲಕ ಸಾವಿರಾರು ಜನರು ಆಶ್ರಯ, ಶಿಕ್ಷಣ, ವೈದ್ಯಕೀಯ ಸೇವೆ, ಸಮಾಲೋಚನೆ ಮತ್ತು ವೃತ್ತಿಪರ ತರಬೇತಿಯನ್ನು ಪಡೆದಿದ್ದಾರೆ.

ಡಾ. ಎಸ್.ಜಿ. ಸುಶೀಲಮ್ಮ ಅವರು ಗ್ರಾಮೀಣಾಭಿವೃದ್ಧಿ ಹಾಗೂ ಮಹಿಳಾ ಸಬಲೀಕರಣ ಕ್ಷೇತ್ರಗಳಲ್ಲಿಯೂ ಮಹತ್ವದ ಕಾರ್ಯ ಮಾಡಿದ್ದಾರೆ. ವಯಸ್ಕರ ಸಾಕ್ಷರತೆ, ಸ್ವ–ಸಹಾಯ ಗುಂಪುಗಳ ಸ್ಥಾಪನೆ, ಉದ್ಯೋಗಾಧಾರಿತ ತರಬೇತಿ, ಸೂಕ್ಷ್ಮ ಸಾಲ ಯೋಜನೆಗಳು ಮತ್ತು ಪಂಚಾಯತ್ ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸಿದ್ದಾರೆ. ಅವರು ಇರುಳಿಗರು ಹಾಗೂ ಕುರುಬ ಸಮುದಾಯಗಳೊಂದಿಗೆ ಕೃಷಿ ಮತ್ತು ಜೀವನೋಪಾಯ ಅಭಿವೃದ್ಧಿ ಯೋಜನೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ವೃಕ್ಷ ಮಹಾದಾಸೋಹ ಪರಿಸರ ಚಳುವಳಿಗೆ ನೇತೃತ್ವ ನೀಡಿ ರಾಜ್ಯದಾದ್ಯಂತ 40 ಲಕ್ಷಕ್ಕೂ ಹೆಚ್ಚು ಗಿಡಗಳನ್ನು ನೆಡುವಲ್ಲಿ ಕೊಡುಗೆ ನೀಡಿದ್ದಾರೆ. ಅವರ ಸೇವೆಯನ್ನು ಗುರುತಿಸಿ ಅನೇಕ ಪ್ರಶಸ್ತಿಗಳು ಲಭಿಸಿವೆ. ಅವುಗಳಲ್ಲಿ:

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರಾಷ್ಟ್ರೀಯ ಪ್ರಶಸ್ತಿ, ರಾಷ್ಟ್ರೀಯ ಬಾಲ ಕಲ್ಯಾಣ ಪ್ರಶಸ್ತಿ, ದುರ್ಗಾಬಾಯಿ ದೇಶಮುಖ್ ಪ್ರಶಸ್ತಿ, ಬಸವಶ್ರೀ ಪ್ರಶಸ್ತಿ, ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ, ದೇವರಾಜ್ ಅರಸು ಪ್ರಶಸ್ತಿ, ಸಾಕ್ಷರತಾ ಕ್ಷೇತ್ರದ ನೆಹರು ಪ್ರಶಸ್ತಿ, ನಾಡಪ್ರಭು ಕೆಂಪೇಗೌಡ ಪ್ರಶಸ್ತಿ, ಇವುಗಳ ಜೊತೆಗೆ ಸಮಾಜ ಸೇವೆಗೆ ನೀಡಿದ ಜೀವಮಾನ ಸಾಧನೆಗಾಗಿ ಹಲವಾರು ಗೌರವಗಳನ್ನು ಪಡೆದಿದ್ದಾರೆ. ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯವು ಅವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಸನ್ಮಾನಿಸಿದೆ. ಗೌರವಾನ್ವಿತರು ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ಆಜೀವ ಸದಸ್ಯರಾಗಿರುತ್ತಾರೆ. ಸಂಸ್ಥೆಯ ಏಳಿಗೆಗಾಗಿ ಸಲಹೆ ಸೂಚನೆಗಳನ್ನು ನೀಡುತ್ತಾ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇವರಿಗೆ ಭಾರತದ 4ನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಪದ್ಮಶ್ರೀ'ಯನ್ನು 2026ರಲ್ಲಿ ನೀಡಿ ಗೌರವಿಸಿರುತ್ತದೆ. ಗೌರವಾನ್ವಿತರಿಗೆ ಪದ್ಮಶ್ರೀ ಪ್ರಶಸ್ತಿ ದೊರೆತಿರುವುದು ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಗೆ ಮತ್ತೊಂದು ಹೆಮ್ಮೆಯ ಗರಿ ಮುಡಿಸಿದಂತಾಗಿದೆ. ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಂಸ್ಥೆಯ ಎಲ್ಲಾ ಸದಸ್ಯರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.



ಪದ್ಮಶ್ರೀ ಪ್ರಶಸ್ತಿ ಪ್ರದಾನ–2026

## ಸುಭಾಷಿತ

"ಪರೋಪಕಾರಾಯ ಫಲಂತಿ ವೃಕ್ಷಾಃ,
ಪರೋಪಕಾರಾಯ ವಹಂತಿ ನದ್ಯಃ
ಪರೋಪಕಾರಾಯ ದುಹಂತಿ ಗಾವಃ,
ಪರೋಪಕಾರ್ಥಮಿದಂ ಶರೀರಮ್"

# ಕೃಷಿವನ

ತ್ರೈಮಾಸಿಕ ವಾರ್ತಾಪತ್ರ

Volume: 8 Issue: 2
ಸಂಪುಟ: 8 ಸಂಚಿಕೆ: 2

## ಸಂಪಾದಕೀಯ ಮಂಡಳಿ

**ಗೌರವ ಸಂಪಾದಕರು**

ಡಾ. ಎಸ್.ಸಿ.ವಿ. ರೆಡ್ಡಿ, ನಿರ್ದೇಶಕರು, ಕೆ.ಎಸ್.ಎಸ್.ಪಿ.ಎ(ನಿ)

**ಪ್ರಧಾನ ಸಂಪಾದಕರು**

ಶ್ರೀ ಎನ್.ಡಿ. ತಿವಾರಿ, ಭಾ.ಅ.ಸೇ(ನಿ)

**ಸಂಪಾದಕರು**

ಶ್ರೀ ಹೆಚ್.ಜಿ. ಶಿವಾನಂದಮೂರ್ತಿ, ಭಾ.ಅ.ಸೇ(ನಿ)

**ಸದಸ್ಯರು**

ಡಾ. ಎಸ್. ರಮೇಶ್, ಭಾ.ಅ.ಸೇ(ನಿ)
ಶ್ರೀ ಎ. ಅಶ್ವಥಯ್ಯ, ಉ.ಅ.ಸಂ(ನಿ)
ಡಾ. ಎ.ಬಿ. ಪಾಟೀಲ, ರಜಿಸ್ಟ್ರಾರ್(ನಿ)
ಶ್ರೀ ಎನ್. ಶಿವರಾಜು, ಉ.ಅ.ಸಂ(ನಿ)
ಶ್ರೀ ಆರ್. ಆಂಜನೇಯರೆಡ್ಡಿ, ಪ್ರಗತಿಪರ ರೈತರು
ಶ್ರೀ ಮಲ್ಲೇಶ್ ಲಿಂಗಾಚಾರ್, ತಂತ್ರಜ್ಞರು
ಡಾ. ಚಂದ್ರಶೇಖರ ಮ. ಬಿರಾದಾರ
ಡಾ. ಟಿ.ಆರ್. ಗುರುಪ್ರಸಾದ್

## ಕಚೇರಿ ವಿಳಾಸ

ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ)
ವನವಿಕಾಸ, ನೆಲಮಹಡಿ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು–560003
ದೂ: 080 23566126
Email: iaftbangalore@gmail.com
www.iaft.co.in

## ಮನವಿ

ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯು (IAFT) 2013 ರಿಂದ ಬೆಂಗಳೂರು ಕೇಂದ್ರ ಸ್ಥಾನದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈ ಸಂಸ್ಥೆಯಲ್ಲಿ ಕೃಷಿಅರಣ್ಯದಲ್ಲಿ ಆಸಕ್ತಿಯುಳ್ಳ ಅಖಿಲ ಭಾರತ ಸೇವೆಯ ಹಾಗೂ ಕರ್ನಾಟಕ ರಾಜ್ಯ ಸೇವೆಯ ಹಾಲಿ ಸೇವೆ ಸಲ್ಲಿಸುತ್ತಿರುವ ಮತ್ತು ನಿವೃತ್ತ ಅಧಿಕಾರಿಗಳು, ಕೃಷಿ ವಿಶ್ವವಿದ್ಯಾನಿಲಯದ ಕುಲಪತಿಗಳು ಹಾಗೂ ಪ್ರಾಧ್ಯಾಪಕರು (ಹಾಲಿ ಸೇವೆ ಸಲ್ಲಿಸುತ್ತಿರುವ ಮತ್ತು ನಿವೃತ್ತ), ಪ್ರಗತಿಪರ ರೈತರು, ಕೈಗಾರಿಕೋದ್ಯಮಿಗಳು ಹಾಗೂ ತಂತ್ರಜ್ಞರು ಸದಸ್ಯರಾಗಿರುತ್ತಾರೆ. ಅನುಭವಿ ತಜ್ಞರನ್ನು ಹೊಂದಿರುವ ಈ ಸಂಸ್ಥೆಯು ಸರ್ಕಾರದ ಅರಣ್ಯ, ಕೃಷಿ, ತೋಟಗಾರಿಕಾ ಇಲಾಖೆ ಹಾಗೂ ರೈತರ ನಡುವೆ ಕೊಂಡಿಯಾಗಿ ಕೃಷಿಅರಣ್ಯ ಪ್ರೋತ್ಸಾಹಿಸಲು ತಾಂತ್ರಿಕ ಸಲಹೆ ಹಾಗೂ ಸಹಕಾರ ನೀಡುತ್ತಿದೆ. ಈ ಸಂಸ್ಥೆಗೆ ಸದಸ್ಯರಾಗಲು ಬಯಸುವವರು ಸಂಸ್ಥೆಯ ಜಾಲತಾಣ (www.iaft.co.in) ದಲ್ಲಿ ಲಭ್ಯವಿರುವ ಅರ್ಜಿ ನಮೂನೆಯ ಪ್ರತಿಯ ನಕಲು ಇಳಿಸಿ ಭರ್ತಿ ಮಾಡಿ, ನಿಗದಿತ ಸದಸ್ಯತ್ವ ಶುಲ್ಕವನ್ನು ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ (IAFT) ಈ ಕೆಳಗಿನ ಬ್ಯಾಂಕ್ ಖಾತೆಗೆ ಚೆಕ್ ಅಥವಾ ಡಿಡಿ ಅಥವಾ ನೆಫ್ಟ್ (NEFT) ಮುಖಾಂತರ ಪಾವತಿಸಿ ಸಂಸ್ಥೆಯ ನಿಯಮಾವಳಿಯಂತೆ (Byelaws) ಸದಸ್ಯರಾಗಬಹುದು.

Canara Bank,
18th Cross, Malleshwaram,
Bengaluru.
Account Holder Name: IAFT
SB Account No: 04242010115100
IFSC: CNRB0010424

**ಡಾ. ಎಸ್. ರಮೇಶ್,** ಕಾರ್ಯದರ್ಶಿ

### ಪರಿವಿಡಿ


| ಕ್ರ.ಸಂ. | ಲೇಖನ | ಪುಟ |
|---|---|---|
| 1 | ನೇರಳೆ ಮರಗಳಲ್ಲಿ ಭಾರೀ ಫಸಲು–ಬರ ಸೂಚಕವೇ? | 5 |
| 2 | ನೇರಳೆ | 6 |
| 3 | 81ರ ಹರೆಯದ ದಣಿವರಿಯದ ಧೀಮಂತ ತೋಟಗಾರಿಕಾ ಕೃಷಿಕ ವಿಜ್ಞಾನಿ, ಡಾ ನಾಗದಾಸನಹಳ್ಳಿ ಚಿಕ್ಕ ಕೆಂಪಯ್ಯ ಪಟೇಲರು | 8 |
| 4 | ಅನ್ನದ ಬಟ್ಟಲು ಈ ತದ್ರೂಪಿ ಕಾಡು ಇದು ದೊಡ್ಡಮಗ್ಗೆಯ ಸಹ್ಯಾದ್ರಿ | 10 |
| 5 | ರಾಷ್ಟ್ರೀಯ ಕೃಷಿ ಅರಣ್ಯ ನೀತಿ– 2014 | 12 |



### ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ಸದಸ್ಯತ್ವ

| ಸದಸ್ಯತ್ವ ವಿವರ | ಶುಲ್ಕ (ರೂ.) |
|---|---|
| ಸಂಸ್ಥಾ ಸದಸ್ಯತ್ವ | 25,000.00 |
| ಪೋಷಕ ಸದಸ್ಯತ್ವ | 20,000.00 |
| ಆಜೀವ ಸದಸ್ಯತ್ವ | 5,000.00 |
| ರೈತ ಸದಸ್ಯತ್ವ | 2,000.00 |

Publisher: IAFT, Chief Editor: N.D. Tiwari, IFS (Retd), KRUSHIVANA, Quarterly News Letter, April-June 2026,
Printed By: S.K. Chandrashekar, Rathna Offset Printers, #120, 1st Main Road, Cauvery Nadhi Road, Brindavana Nagar, Bengaluru-560019
Volume: 8
Issue: 2

**ಸಂಪಾದಕೀಯ...**

# ಕೃಷಿಅರಣ್ಯ ಇಂಗಾಲದ ಡೈ ಆಕ್ಸೈಡ್ ತಗ್ಗಿಸುವ ಮತ್ತು ರೈತರ ಆದಾಯವನ್ನು ಹೆಚ್ಚಿಸುವ ಸಾಧನವಾಗಿದೆ



ಎನ್.ಡಿ. ತಿವಾರಿ, ಭಾ.ಅ.ಸೇ (ನಿ)
**ಅಧ್ಯಕ್ಷರು**

ಕೃಷಿಅರಣ್ಯಕ್ಕೆ ನೀಡಲಾಗುತ್ತಿರುವ ನಿರಂತರ ನೀತಿಯ ಪ್ರೋತ್ಸಾಹ ಮತ್ತು ಖಾಸಗಿ ಬಂಡವಾಳ ಹೂಡಿಕೆಯು ಕೃಷಿಅರಣ್ಯವನ್ನು ಕೇಂದ್ರ ಬಿಂದುವಾಗಿ ಬಿಂಬಿಸಿದ್ದು, ಭಾರತದ ಕೃಷಿ ಪದ್ಧತಿಗಳ ಸ್ಥಿತಿಸ್ಥಾಪಕತ್ವದ ಮುಂದಿನ ಮಾರ್ಗವಾಗಿದೆ.

ಹವಾಮಾನ ಬದಲಾವಣೆಯು ಭಾರತದ ಕೃಷಿ ಕ್ಷೇತ್ರವನ್ನು ಮರುರೂಪಿಸುತ್ತಿದೆ. ತಾಪಮಾನ ಹೆಚ್ಚಳ, ಅಕಾಲಿಕ ಮಳೆ ಮತ್ತು ಮಣ್ಣಿನ ಆರೋಗ್ಯದ ಕುಸಿತವು ಲಕ್ಷಾಂತರ ರೈತರನ್ನು ಕಂಗೆಡಿಸಿದೆ. ಭಾರತದ ಗ್ರಾಮೀಣ ಭಾಗದ ಜನರ ಜೀವನೋಪಾಯಕ್ಕೆ ಕೃಷಿಯೇ ಮೂಲಾಧಾರವಾಗಿದೆ. ಅನಿರೀಕ್ಷಿತ ಹವಾಮಾನ ವೈಪರಿತ್ಯಗಳಿಂದಾಗಿ ರೈತರ ಬೆಳೆಗಳು ವಿಫಲವಾಗುತ್ತಿದ್ದು, ಆಹಾರ ಭದ್ರತೆಗೆ ಮತ್ತು ಆರ್ಥಿಕ ಭದ್ರತೆಗೆ ಧಕ್ಕೆ ಉಂಟು ಮಾಡಿದೆ. 20047 ರ ವಿಕಸಿತ ಭಾರತದ ಮುಂದಿನ ದೃಷ್ಟಿಯು ಆರ್ಥಿಕವಾಗಿ ಅನುಕೂಲಕರವಾದ, ಹವಾಮಾನ ಪೂರಕ ಕ್ರಿಯಾ ಯೋಜನೆಗಳು ಮಹತ್ವದ ಪಾತ್ರ ನಿರ್ವಹಿಸಲಿದೆ.

ಕೃಷಿಅರಣ್ಯವು ಪ್ರಾಯೋಗಿಕವಾದ, ರೈತ ಸ್ನೇಹಿಯಾದ ಮಾದರಿಯಾಗಿದ್ದು, ಪರಿಸರದ ಸ್ಥಿತಿ ಸ್ಥಾಪಕತ್ವದೊಡನೆ ಆರ್ಥಿಕ ಸುಸ್ಥಿರತೆಗೆ ದಾರಿ ತೋರಿಸಲಿದೆ. ಕೃಷಿಅರಣ್ಯದಲ್ಲಿ (ಮರಾಧಾರಿತ) ಕೃಷಿ ಬೆಳೆಗಳೊಂದಿಗೆ ಮರಗಳನ್ನು ಮತ್ತು ಜಾನುವಾರುಗಳನ್ನು ಜೋಡಿಸುವುದರಿಂದ, ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವುದರೊಂದಿಗೆ, ಇತರೆ ಮರಾಧಾರಿತ ಉತ್ಪನ್ನಗಳಾದ ಟಿಂಬರ್, ಹಣ್ಣು, ಮೇವು, ಹಸಿರೆಲೆ ಗೊಬ್ಬರ ಮತ್ತು ಇತರೆ ಮರಗಳ ಉತ್ಪನ್ನಗಳು ರೈತರಿಗೆ ಹೆಚ್ಚುವರಿ ಆದಾಯದ ಮೂಲಗಳಾಗಿವೆ. ತನ್ಮೂಲಕ ನೈಸರ್ಗಿಕ ಕೃಷಿಗೆ ಸಹಕಾರಿಯಾಗುವುದರಿಂದ, ರಸಗೊಬ್ಬರದ ವೆಚ್ಚವನ್ನು ತಗ್ಗಿಸಲಾಗುವುದು.

ಭಾರತದಲ್ಲಿ ಶೇಕಡ 54.8% ರಷ್ಟು ಭೌಗೋಳಿಕ ಪ್ರದೇಶವು ಕೃಷಿ ಭೂಮಿಯಾಗಿದ್ದು, ಶೇಕಡಾ 54.6 ರಷ್ಟು ಕೂಲಿಕಾರರು (ಶ್ರಮಿಕರು) ಕೃಷಿಯಲ್ಲಿ ಮತ್ತು ಕೃಷಿಗೆ ಸಂಬಂಧಿಸಿದ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವರು. ಇಂತಹ ಸನ್ನಿವೇಶದಲ್ಲಿ ಸಾಧಾರಣವಾದ ಕೃಷಿಅರಣ್ಯದ ಮಾದರಿಗಳು ಗಣನೀಯವಾಗಿ ಇಂಗಾಲದ ಡೈ ಆಕ್ಸೈಡ್‌ನ್ನು ಕಡಿಮೆಗೊಳಿಸಲಿವೆ. ಬೃಹತ್ತಾದ ಮರು ಅರಣ್ಯೀಕರಣ ಯೋಜನೆಗಳಿಗೆ ಅದಕ್ಕೆ ಮೀಸಲಾದ ಭೂಮಿ ಮತ್ತು ದೀರ್ಘಕಾಲದ ಸಮಯ (ಗೆಸ್ಟೇಷನ್ ಪಿರಿಯಡ್) ಬೇಕಾಗಿರುತ್ತದೆ. ಆದರೆ ಕೃಷಿಅರಣ್ಯವು ಈಗಾಗಲೇ ಚಾಲ್ತಿಯಲ್ಲಿರುವ ಕೃಷಿ ಪದ್ಧತಿಗಳನ್ನು ಅಡ್ಡಿಪಡಿಸದೇ ಮಿಳಿತಗೊಂಡಿರುತ್ತದೆ. ಇದು ಸುಲಭ ಸಾಧ್ಯವಾದ, ಸಮಸ್ಯೆಗಳಿಲ್ಲದೇ ವಿವಿಧ ಕೃಷಿ ವಲಯಗಳಲ್ಲಿ ಅಳವಡಿಸಿಕೊಳ್ಳಬಹುದಾದ ಸರಳ ಪದ್ಧತಿಯಾಗಿದೆ.


ಈ ಮಾದರಿಯು ಭಾರತದ ಹವಾಮಾನ ಬದಲಾವಣೆಯ ಪರಿಕಲ್ಪನೆಗೆ ಹೊಂದಿಕೊಂಡಿದೆ. ದೇಶದಲ್ಲಿ ಈಗಾಗಲೇ 2.29 ಬಿಲಿಯನ್ ಟನ್ ಇಂಗಾಲದ ಡೈ ಆಕ್ಸೈಡ್‌ಗೆ ಸಮನಾದ ಇಂಗಾಲದ ಹಿಡಿದಿಡುವಿಕೆಯನ್ನು 2021 ರಲ್ಲಿ ನಿರ್ಧರಿಸಿದೆ ಮತ್ತು 2031 ರಿಂದ 2035 ರಷ್ಟಕ್ಕೆ 3.5 ರಿಂದ 4 ಬಿಲಿಯನ್ ಟನ್ ತಗ್ಗಿಸುವ ಗುರಿಯನ್ನು ಹೊಂದಿದೆ. ಇವುಗಳನ್ನು ಸಾಧಿಸಲು ದೇಶದ ಸಣ್ಣ ಮತ್ತು ಅತಿ ಸಣ್ಣ ರೈತರ ಪಾತ್ರ ಬಹಳ ಮಹತ್ವದ್ದಾಗಿದ್ದು, ಅವರಿಗೆ ಆರ್ಥಿಕ ಸಹಕಾರ ನೀಡುವುದರೊಂದಿಗೆ ಹೆಚ್ಚು ಹೆಚ್ಚು ಸಣ್ಣ ರೈತರ ಕೃಷಿ ಭೂಮಿಯಲ್ಲಿ ಮರಗಳನ್ನು ಬೆಳೆಸುವಂತೆ ಪ್ರೋತ್ಸಾಹಿಸಬೇಕಾಗಿದೆ ಹಾಗೂ ಲಾಭದಾಯಕವಾದ ಕೃಷಿಅರಣ್ಯದ ಮಾದರಿಗಳನ್ನು ಅಳವಡಿಸಿಕೊಳ್ಳಲು ಅರಿವು ಮೂಡಿಸುವ ಅಗತ್ಯವಿದೆ. ಆದರೆ ಇಂತಹ ಅನುಷ್ಠಾನದಲ್ಲಿ ಅನೇಕ ಅಡಚಣೆಗಳಿವೆ.

ರೈತರ ಮುಂದಿರುವ ಸವಾಲುಗಳು

ದೇಶದಲ್ಲಿ ಹೆಚ್ಚಿನ ಸಂಖ್ಯೆಯ ರೈತರು ಕಡಿಮೆ ಪ್ರಮಾಣದ ಭೂಮಿಯನ್ನು ಹೊಂದಿರುವರು ಹಾಗೂ ಹೂಡಿಕೆ ಮಾಡಲು ಹಣಕಾಸಿನ ತೊಂದರೆಗಳಿರುವುದರಿಂದ, ಮರಗಳು ಮತ್ತು ಹಣ್ಣಿನ ನಡುತೋಪುಗಳ ನಿರ್ಮಾಣಕ್ಕೆ ಅವಶ್ಯಕವಾದ ಸಸಿಗಳ ಪೂರೈಕೆ, ರಸಗೊಬ್ಬರ ಮತ್ತು ಹನಿ ನೀರಾವರಿ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಹಣಕಾಸಿನ ನೆರವನ್ನು ನೀಡಬೇಕಿದೆ. ಇದರೊಂದಿಗೆ ಮತ್ತೊಂದು ಮಹತ್ವದ ಸವಾಲೆಂದರೆ ಮಾರುಕಟ್ಟೆಯ ಸೌಲಭ್ಯದ ಕೊರತೆ, ಬೆಳೆದ ಮರದ ಬೆಳೆಗಳಿಗೆ ಇತರೆ ಕೃಷಿ ಬೆಳೆಗಳಿಗಿರುವಂತಹ ಸೌಲಭ್ಯವನ್ನು ಅಂದರೆ ಈಗಾಗಲೇ ಸ್ಥಾಪಿತವಾಗಿರುವ ಕೃಷಿ ಮಾರುಕಟ್ಟೆಯಲ್ಲಿಯೇ ಕೃಷಿ ಬೆಳೆಗಳೆಂದು ಪರಿಗಣಿಸಿ ಮಾರಾಟಕ್ಕೆ ಅವಕಾಶ ಕಲ್ಪಿಸುವ ಅವಶ್ಯಕತೆ ಬಹಳ ಮಹತ್ವದ್ದಾಗಿದೆ. ಕೃಷಿ ಜಮೀನುಗಳಲ್ಲಿ ಬೆಳೆದ ಮರದ ಬೆಳೆಗಳ ಕಟಾವಿಗೆ ಮತ್ತು ಮಾರಾಟಕ್ಕೆ ಈಗಿರುವ ಕಾನೂನುಗಳನ್ನು ಸರಳೀಕರಿಸಿ ರೈತಸ್ನೇಹಿಯಾಗಿಸುವ ಅವಶ್ಯಕತೆ ಬಹಳ ಮಹತ್ವದ್ದಾಗಿದೆ.

ಈಗಾಗಲೇ ಸರ್ಕಾರದ ಅನೇಕ ಯೋಜನೆಗಳಲ್ಲಿ ಸ್ಥಾಪಿತವಾಗಿರುವ ರೈತ ಉತ್ಪಾದಕ ಸಂಸ್ಥೆಗಳನ್ನು (FPO) ಸಬಲೀಕರಣಗೊಳಿಸಿ ಮರ ಮತ್ತು ಮರದ ಉತ್ಪನ್ನಗಳ ಮಾರಾಟಕ್ಕೂ ಸಹ ಅವಕಾಶ ಕಲ್ಪಿಸಬೇಕಾಗಿದೆ. ಇದರಿಂದ ಮರದ ಉತ್ಪನ್ನಗಳ ಮಾರುಕಟ್ಟೆಯ ಸಂಪರ್ಕವನ್ನು ಅಭಿವೃದ್ಧಿಪಡಿಸುವುದರೊಂದಿಗೆ ಸಂಸ್ಥೆಗಳಿಗೆ ಲಾಭದ ವ್ಯಾಪಾರ ಮಾಡುವ ಶಕ್ತಿ (ಚೌಕಾಸಿ/ ಬಾರ್ಗೇಯ್ನಿಂಗ್ ಪವರ್) ದೊರೆಯಲಿದೆ. ಇದೇ ಸಂದರ್ಭದಲ್ಲಿ ವಸ್ತುಗಳ ಮೌಲ್ಯವರ್ಧನೆಗೆ, ವಿನ್ಯಾಸ, ಗುಣಮಟ್ಟ, ಪ್ಯಾಕೇಜಿಂಗ್ ಮತ್ತು ವಿಸ್ತರಣೆಯ ಗುರಿಯು ರೈತರಲ್ಲಿ ವಿಶ್ವಾಸ ತುಂಬುವುದು. ಕೆಲವೊಂದು ಸಂದರ್ಭಗಳಲ್ಲಿ ರೈತರು ಅನೇಕ ಕಾರಣಗಳಿಂದ ಕೊಯ್ಲಿನ ತಕ್ಷಣವೇ ಬೆಳೆದ ಬೆಳೆಗಳನ್ನು ಮಾರಾಟ ಮಾಡುವುದರಿಂದ ಕಡಿಮೆ ಬೆಲೆ ದೊರೆಯುವ ಸಾಧ್ಯತೆಗಳೇ ಹೆಚ್ಚಾಗಿರುತ್ತದೆ. ಇಲ್ಲಿ ದೀರ್ಘಕಾಲ ಶೇಖರಿಸಬಹುದಾದ ಬೆಳೆಗಳಲ್ಲಿ ಮರದ ಉತ್ಪನ್ನಗಳು ಸೇರುವುದರಿಂದ ಮರದ ಉತ್ಪನ್ನಗಳಿಗೆ ದೀರ್ಘಕಾಲದಲ್ಲಿ ಹೆಚ್ಚಿನ ಬೆಲೆ ದೊರೆಯುವ ಸಾಧ್ಯತೆ ಇರುವುದರಿಂದ ರೈತರು ಪ್ರಾಯೋಗಿಕವಾಗಿ ಕೃಷಿಅರಣ್ಯವನ್ನು ಆಯ್ಕೆ ಮಾಡಿಕೊಳ್ಳುವುದರಿಂದ ಹೆಚ್ಚುವರಿ ಆದಾಯದೊಂದಿಗೆ ಹವಾಮಾನ ನಿಯಂತ್ರಣದತ್ತ ಹೆಜ್ಜೆ ಇಟ್ಟಂತಾಗಲಿದೆ.

# ನೇರಳೆ ಮರಗಳಲ್ಲಿ ಭಾರೀ ಫಸಲು-ಬರ ಸೂಚಕವೇ?



**ಡಾ.ವಿಜಯ್ ಅಂಗಡಿ**, ರಾಜ್ಯ ಪರಿಸರ ಪ್ರಶಸ್ತಿ ಪುರಸ್ಕೃತರು, ಹಾಸನ.

ಈ ವರ್ಷದ ಮಳೆ ಕೊರತೆಗೂ ನೇರಳೆ ಹಣ್ಣಿನ ಹೇರಳ ಫಸಲಿಗೂ ಸಂಬಂಧ ಇರಬಹುದು ಎಂದು ವಿಚಾರಗಳು ಚರ್ಚೆಯಾಗುತ್ತಿವೆ. ಸಾಮಾಜಿಕ ಮಧ್ಯಮಗಳಲ್ಲಿ ಹರಿದಾಡಿದ ಕೆಲವು ಸಂಗತಿಗಳನ್ನು ಸಂಗ್ರಹಿಸಿ ಇಲ್ಲಿ ಉಲ್ಲೇಖಿಸಲಾಗಿದೆ. ಮಾರುಕಟ್ಟೆಯಲ್ಲಿ ಈ ಬಾರಿ ಕಂಡ ನೇರಳೆ ಹಣ್ಣುಗಳನ್ನು ಕಳೆದ ಕೆಲವು ದಶಕಗಳಲ್ಲಿ ಕಾಣದಿರುವುದು ಸೋಜಿಗವನ್ನು ಉಂಟು ಮಾಡಿದೆ. ಯಾವ ಕಾಳಜಿಯನ್ನು ಕೇಳದ ನೇರಳೆ ಮರವು ನೀರಿನ ಕೊರತೆಯಲ್ಲೂ ತನ್ನ ಕಳೆಯನ್ನು ಕಳೆದುಕೊಳ್ಳುವುದಿಲ್ಲ. ಸಣ್ಣ ಗಿಡಗಳೂ ಬೇಸಿಗೆಯ ದಿನಗಳಲ್ಲೂ ಬಾಡದೇ ಹೊಳಪಿನ ಎಲೆಗಳನ್ನು ಬಿಟ್ಟುಕೊಂಡು ಒಂದು ರೀತಿಯಲ್ಲಿ ನಮಗೆ ಅಚ್ಚರಿಯನ್ನು ತರಿಸುತ್ತವೆ.

ಕಳೆದ ವರ್ಷ ತೀರಾ ಕಡಿಮೆ ಹಣ್ಣು ಬಿಟ್ಟಿದ್ದ ನೇರಳೆ ಮರಗಳು ಈ ವರ್ಷ ಹೇರಳವಾದ ಹಣ್ಣಿನಿಂದ ಕಂಗೊಳಿಸಿದವು. ನೇರಳೆ ಮರಗಳು ಹೀಗೆ ಯಥೇಚ್ಛವಾಗಿ ಹಣ್ಣು ಬಿಡುತ್ತವೋ ಆ ವರ್ಷ ಬರಗಾಲ ಇರುತ್ತದೆ” ಎಂದು ಅನುಭವಿಗಳು ಹೇಳುವುದಿದೆ.

ಈ ಪಾರಂಪರಿಕ ಜ್ಞಾನವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿದಾಗ ಸರಿ ಎನಿಸುತ್ತದೆ. ಈ ವಿಶೇಷ ಪ್ರಕ್ರಿಯೆಗೆ ಒತ್ತಡದ ಫಲ ಭರಿಸುವಿಕೆ ಎಂದು ಕರೆಯುತ್ತಾರೆ. ಮರಕ್ಕೆ ಭೂಮಿಯೊಳಗಿನ ನೀರಿನ ಅಭಾವ ಕಾಣಿಸಲು ಪ್ರಾರಂಭಿಸಿದಾಗ ಅಥವಾ ಹವಾಮಾನದಲ್ಲಿ ದೊಡ್ಡ ಬದಲಾವಣೆ ಆಗಲಿದೆ ಎಂಬ ಸೂಚನೆ ಸಿಕ್ಕಾಗ, ಮರವು “ರಕ್ಷಣಾತ್ಮಕ ವ್ಯವಸ್ಥೆ”ಗೆ ಹೋಗುತ್ತದೆ. ಮುಂದಿನ ದಿನಗಳಲ್ಲಿ ನಾವು ಬದುಕದೇ ಇರಬಹುದು. ಆಗ ನಮ್ಮ ಸಂತತಿಯು ಭೂಮಿಯ ಮೇಲೆ ಉಳಿಯಲಿ ಎಂದು ಮರವು ತನ್ನ ಸಂಪೂರ್ಣ ಶಕ್ತಿಯನ್ನು ಹಣ್ಣುಗಳನ್ನು ಭರಿಸಿ ಬೀಜ ಸೃಷ್ಟಿಗೆ ಮುಂದಾಗುತ್ತದೆ. ಬರವನ್ನು ಸಹಿಸಿಕೊಳ್ಳುವ ನೇರಳೆಯು ಅಷ್ಟು ಸುಲಭವಾಗಿ ತಾನು ಅಂತ್ಯ ಕಾಣದಿದ್ದರೂ ಭೂಮಿಯ ಮೇಲಿನ ಹಸಿರಿನ ಹೊದಿಕೆಯನ್ನು ಉಳಿಸಲು ಈ ರೀತಿಯ ಕಾರ್ಯತಂತ್ರವನ್ನು ಹೂಡುತ್ತದೆ ಎಂದು ನಮಗೆ ಅನಿಸುತ್ತದೆ.

ಸಸ್ಯಗಳು ಹವಾಮಾನದ ಬದಲಾವಣೆಗಳನ್ನು ನಮಗಿಂತ ಬಹಳ ಮುಂಚಿತವಾಗಿಯೇ ಗುರುತಿಸುತ್ತವೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸುವವರಿಗೆ ಗೊತ್ತಾಗುತ್ತದೆ. ನೇರಳೆ ಮರದ ಬೇರು ಮಣ್ಣಿನ ಆಳದ ಪದರದವರೆಗೂ ಹೋಗುತ್ತದೆ. ಭೂಮಿಯ ಒಳಗಡೆ ನೀರಿನ ಪ್ರಮಾಣವು ತೀರಾ ಕಡಿಮೆಯಾಗುತ್ತಾ ಬಂದಂತೆ ಈ ಬೇರುಗಳಿಗೆ ಸಹಜವಾಗಿ ಒತ್ತಡವು ಶುರುವಾಗುತ್ತದೆ. ಮುನ್ಸೂಚನೆಯನ್ನು ಅರಿಯುವ ಮರಗಳು ಬರಗಾಲದ ಸನ್ನಿವೇಶವನ್ನು ನಿಭಾಯಿಸಲು ಸಜ್ಜಾಗುತ್ತವೆ.

ಯಾವ ಬೇಸಿಗೆಯಲ್ಲಿ ನೇರಳೆಯ ಅಧಿಕ ಫಸಲು ಬರುತ್ತದೆಯೋ, ಅದು ಭವಿಷ್ಯದ ಶುಷ್ಕ ಕಾಲದ ಬಗ್ಗೆ ನೀಡುವ ಎಚ್ಚರಿಕೆಯಾಗಿರುತ್ತದೆ ಎಂದು ವಿಶ್ಲೇಷಿಸಲಾಗಿದೆ. ಮಾವು, ಬೇವು ಮತ್ತು ಹುಣಸೆ ಮರಗಳ ಫಲ ನೀಡುವ ವಿಚಾರವನ್ನು ಮುಂದಿಟ್ಟುಕೊಂಡು ಆಗುವ ಮಳೆಯ ಕುರಿತು ಚರ್ಚೆ ಮಾಡುವುದಿದೆ. ಬಿದಿರು ಹೂವು ಬಿಟ್ಟ ವರ್ಷದಲ್ಲೂ ಬರ ಕಾಣುತ್ತದೆ ಎಂದು ಹೇಳುವುದಿದೆ.
ಗಟ್ಟಿ ಸ್ವಭಾವದ ಬೇವಿನ ಮರಗಳು ಈ
ವರ್ಷ ಹಲವೆಡೆ ಮಂಕಾಗಿವೆ. ಮರಗಳಲ್ಲಿ ಫಸಲು ಕಮ್ಮಿ ಕಾಣಿಸಿಕೊಂಡಿದ್ದು ಅಲ್ಲಲ್ಲಿ ಮರಗಳು ಒಣಗುತ್ತಿವೆ. ಹುಣಸೆ ಮರಗಳಲ್ಲಿ ಹಿಂದಿನ ಬಾರಿಯಂತೆ ಈ ಬಾರಿಯೂ ಒಳ್ಳೆಯ ಹೂವು ಆಗಿದೆ. ಹುಣಸೆ ಹುಸಿ ಆಗಬಾರದು, ಮಾವು ಕಾಯಬಾರದು ಎಂದು ಹೇಳುವುದಿದೆ.

ನಾವು ಏನೇ ವಿಶ್ಲೇಷಣೆ ಮಾಡಲು ಹೊರಟರೂ ಎಷ್ಟೋ ಸಾರಿ ನಿಖರವಾದ ಚಿತ್ರಣವು ಕಾಣುವುದಿಲ್ಲ. ಮಳೆ ಕೊರತೆಯ ವರ್ಷಗಳಲ್ಲೂ ಕೆಲವು ಕಡೆ ಹದವಾದ ಮುಂಗಾರು ಮತ್ತು ಹಿಂಗಾರು ಮಳೆ ಬಂದಿರುವುದಿದೆ. ಉದಾಹರಣೆಗೆ 2017 ರಲ್ಲಿ ರಾಜ್ಯದ ಹಲವೆಡೆ ಮಳೆಯ ಕೊರತೆ ಕಾಣಿಸಿತು. ಆದರೆ ಕೋಲಾರದಲ್ಲಿ ಆ ವರ್ಷ ಒಳ್ಳೆ ಮಳೆ ಬಂದು ಕೆರೆ ಕಟ್ಟೆಗಳು ತುಂಬಿದವು. ನಮ್ಮ ದೇಶದಲ್ಲಿ ಆಗಾಗ್ಗೆ ಮಳೆಯ ಅಭಾವ ಆಗುತ್ತಿರುತ್ತದೆ. ಈಚಿನ ವರ್ಷಗಳಲ್ಲಂತೂ ವ್ಯತ್ಯಾಸಗಳು ಹೆಚ್ಚಾಗುತ್ತಿವೆ. ನೀರು ಕೇಳುವ ತೆಂಗು, ಅಡಿಕೆ ಸೊರಗಿ ಒಣಗಿ ಹೋಗಿವೆ. ಮಾವಿನ ಮರಗಳು ಸಹ ನೀರಿನ ಅತೀ ಕೊರತೆಯಿಂದ ಇನ್ನಿಲ್ಲವಾದವು. ನಿರೀಕ್ಷೆಯಂತೆ ರಾಗಿಯೂ ಬಾರದಿರುವ ವರ್ಷಗಳಿವೆ. 1876, 1899, 1918, 1965, 1972, 1979, 1987, 2002, 2009, 2013,, 2015 ರಿಂದ 2018, 2023 ಇತ್ಯಾದಿ ವರ್ಷಗಳಲ್ಲಿ ಮಳೆಯ ಅಭಾವ ಕಾಣಿಸಿಕೊಂಡು ಬರೀ ಮನುಷ್ಯರಿಗಲ್ಲದೇ ಪ್ರಾಣಿ, ಪಕ್ಷಿ ಮತ್ತು ಇತರೇ ಜೀವಿಗಳಿಗೆ ತಾಪತ್ರಾಯಗಳು ಆಗಿವೆ. ಒಂದು ರೀತಿಯಲ್ಲಿ ಬರ ಅಥವಾ ಮಳೆಯ ಕೊರತೆ ಎನ್ನುವುದು ಸ್ವಾಭಾವಿಕ ಎನಿಸಿದರೂ ಆ ಸಂದರ್ಭವನ್ನು ನಿಭಾಯಿಸುವ ನಿಟ್ಟಿನಲ್ಲಿ ನಾವು ಕೆಲಸ ಕಾರ್ಯಗಳನ್ನು ಮಾಡುತ್ತಾ ಸಾಗಬೇಕು. ಇಲ್ಲವಾದರೆ ನಾನಾ ರೀತಿಯ ಸಮಸ್ಯೆಗಳನ್ನು ನಾವು ಎದುರಿಸಬೇಕಾಗುತ್ತದೆ. ಪ್ರತೀ ವರ್ಷವೂ ಬೀಳುವ ಮಳೆ ಸಮನಾಗಿ ಇರುವುದಿಲ್ಲ. ಕೊರತೆಯೂ ಒಂದು ರೀತಿಯಲ್ಲಿ ಎಲ್ಲಾ ಜೀವಿಗಳಿಗೆ ಪಾಠವಾಗುತ್ತದೆ. ಆದರೇ ಅತಿ ಕೊರತೆಯಿಂದ ಹಾನಿಯ ಪ್ರಮಾಣ ಹೆಚ್ಚಾಗುತ್ತದೆ.

*ಲೇಖಕರ ಸಂಪರ್ಕಕ್ಕಾಗಿ:*
**ಮೊ: 94489 96495**
VIJAYANGADI965@GMAIL.COM

**ಜಾಹೀರಾತು ವಿವರಗಳು**

ಕೃಷಿವನ ವಾರ್ತಾಪತ್ರಿಕೆಯಲ್ಲಿ ಜಾಹೀರಾತು ನೀಡಲು ನಿಗದಿಪಡಿಸಿದ ದರಗಳು.

| ಕ್ರಸಂ | ವಿಸ್ತೀರ್ಣ | ಕಪ್ಪು-ಬಿಳುಪು ದರ (ರೂ.ಗಳಲ್ಲಿ) | ವರ್ಣಮಯ ದರ (ರೂ.ಗಳಲ್ಲಿ) | ಅವಧಿ |
|---|---|---|---|---|
| 1 | 1/4 ಪುಟ | 2500/- | 5000/- | 1 ವರ್ಷ |
| 2 | 1/2 ಪುಟ | 5000/- | 10000/- | 1 ವರ್ಷ |
| 3 | 1 ಪುಟ | 10000/- | 20000/- | 1 ವರ್ಷ |

# ನೇರಳೆ



**ಲೇಖಕರು: ಹೆಚ್.ಜಿ. ಶಿವಾನಂದಮೂರ್ತಿ,** ಭಾ.ಅ.ಸೇ (ನಿ)

**ಆಂಗ್ಲ ಭಾಷೆ:** ಜಾಮೂನ್/ ಸ್ಕೀಲ್ಸ್ ಜಾಮೂನ್
**ವೈಜ್ಞಾನಿಕ ಹೆಸರು:** Syzygium cumini (L.)
**ಕುಟುಂಬ ವರ್ಗ:** ಮಿರಟೇಶಿ

ನೇರಳೆ ಹಣ್ಣು ಇತ್ತೀಚಿನ ದಿವಸಗಳಲ್ಲಿ ಜನರ ವಿಶ್ವಾಸವನ್ನು ಗಳಿಸಿರುವ ಅದರಲ್ಲೂ ವಿಶೇಷವಾಗಿ ಡಯಾಬಿಟಿಸ್ ಕಾಯಿಲೆಗೆ ತುತ್ತಾಗಿರುವವರಿಗೆ ಒಂದು ರೀತಿಯಲ್ಲಿ ವರವಾಗಿ ಹೆಸರು ಗಳಿಸಿದೆ. ಇದನ್ನು ಜಾಮೂನ್, ಜಾವಾ ಪ್ಲಮ್ ಅಥವಾ ಭಾರತದ ಬ್ಲಾಕ್ ಬೆರ್ರಿ ಎನ್ನುವರು. ಭಾರತೀಯ ಮೂಲದ ಬೇಸಿಗೆಯಲ್ಲಿ ದೊರೆಯುವ ಸೂಪರ್ ಫ್ರೂಟ್ ಎನ್ನಲಾಗುವುದು.

ಈ ಹಣ್ಣು ಅತ್ಯಂತ ಹೆಚ್ಚಿನ ವಿಟಮಿನ್–ಸಿ, ಕಬ್ಬಿಣ ಮತ್ತು ಆಂಟಿ ಆಕ್ಸಿಡೆಂಟ್‌ಗಳನ್ನು ಹೊಂದಿರುವ ಮತ್ತು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವ, ರಕ್ತದಲ್ಲಿಯ ಸಕ್ಕರೆ ಅಂಶವನ್ನು ಸರಿಪಡಿಸುವ ಹಣ್ಣಾಗಿರುವುದರಲ್ಲಿ ಸಕ್ಕರೆ ಕಾಯಿಲೆ ಹೊಂದಿರುವವರ ಅಚ್ಚುಮೆಚ್ಚಿನ ಹಣ್ಣಾಗಿದೆ.



ಇದರ ತಾಜಾ ಹಣ್ಣುಗಳನ್ನು ಹಾಗೆಯೇ ತಿನ್ನಬಹುದು. ಅದಕ್ಕೆ ಸ್ವಲ್ಪ ಉಪ್ಪನ್ನು ಸೇರಿಸಿದರಂತೂ ರುಚಿಯಲ್ಲಿ ಸಮನಿಲ್ಲದಂತಹ ಹಣ್ಣು. ಇದರ ಪಲ್ಪ್‌ನ್ನು ಹಣ್ಣಿನ ರಸ ಮತ್ತು ತಂಬುಳಿಯಂತಹ ಪಾರಂಪರಿಕ ಖಾದ್ಯ ತಯಾರಿಕೆಯಲ್ಲಿ ಬಳಸಲಾಗುವುದು. ಇದರ ಬೀಜಗಳನ್ನು ಒಣಗಿಸಿ ಪೌಡರ್ ಮಾಡಿ ಔಷಧ ತಯಾರಿಕೆಯಲ್ಲಿ ಉಪಯೋಗಿಸಬಹುದು.

ನೇರಳೆ ಎನ್ನುವ ಪದ ನೀರಿನ ಸನಿಹದಲ್ಲಿ ಬೆರೆಯುವ ಮರ ಎಂಬ ಅರ್ಥ ಕೊಡುತ್ತದೆ. ಆದರೆ ಇದನ್ನು ಒಣ ಭೂಮಿಯಲ್ಲೂ ಸಹ ಯಶಸ್ವಿಯಾಗಿ ಆರ್ಥಿಕ ಬೆಳೆಯಾಗಿ ಬೆಳೆಯಲಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಬೆಳೆಯುತ್ತಿತುವಂತಹ ಅತ್ಯಂತ ವಾಣಿಜ್ಯ ತೋಟಗಾರಿಕಾ ಬೆಳೆಗಳಲ್ಲಿ ಒಂದಾಗಿದ್ದು, ವಿಶೇಷವಾಗಿ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಮತ್ತು ಬೆಂಗಳೂರು ಸುತ್ತಮುತ್ತ ಹಲವು ರೈತರು ವಾಣಿಜ್ಯ ಹಣ್ಣಿನ ಬೆಳೆಯಾಗಿ ಬೆಳೆಯುತ್ತಿದ್ದಾರೆ.

ಈ ಮರದ ಬೀಜಗಳು ಜೂನ್ ನಿಂದ ಆಗಸ್ಟ್ ತಿಂಗಳಲ್ಲಿ ಬಲಿಯುತ್ತವೆ. ಒಂದು ಹಣ್ಣಿನಲ್ಲಿ ಒಂದೇ ಬೀಜವನ್ನು ಹೊಂದಿರುವುದು. ತಾಜಾ ಹಣ್ಣುಗಳನ್ನು ಮರಗಳಿಂದ ತೆಗೆದು ನೆರಳಿನಲ್ಲಿ ಗುಂಪು ಹಾಕಿ, ಹಣ್ಣುಗಳನ್ನು ನೀರಿನಲ್ಲಿ ತೊಳೆಯುವುದರಿಂದ ಪಲ್ಪ್ ತೆಗೆಯಲು ಸುಲಭವಾಗುವುದು. ನಂತರ ನೆರಳಿನಲ್ಲಿಯೇ ಒಣಗಿಸಿ, ಬೀಜಗಳು 15 ದಿವಸಗಳೊಳಗೇ ಭೂಮಿಯಲ್ಲಿ ಮೊಳಕೆಯೊಡೆಯಲು ಹಾಕಬೇಕಿದೆ. ಈ ಬೀಜಗಳ ಮೊಳಕೆಯೊಡೆಯುವಿಕೆಯು ಬಹಳ ಕಡಿಮೆ ಸಮಯ ಹೊಂದಿರುತ್ತವೆ. ಭೂಮಿಯಲ್ಲಿ ಹಾಕಿದ 10–15 ದಿವಸಗಳಲ್ಲಿ ಮೊಳಕೆಯೊಡೆಯುತ್ತವೆ. ಮೊಳಕೆಯೊಡದ 10–15 ದಿವಸಗಳಲ್ಲಿ ಸಸ್ಯಗಳನ್ನು ಪಾಲಿಬ್ಯಾಗ್‌ಗಳಲ್ಲಿ ನಾಟಿ ಮಾಡುವುದು ಒಳ್ಳೆಯದು.

**ಬೀಜೋಪಚಾರ:** ಬೀಜೋಪಚಾರದ ಅವಶ್ಯಕತೆ ಇಲ್ಲ. ಒಂದು ಕೆಜಿ ಕಣ್ಣಿನಲ್ಲಿ 650 ರಿಂದ 750 ಬೀಜಗಳು ದೊರೆಯಲಿದೆ.

ಸಸಿಗಳ ಬೆಳೆಸುವಿಕೆ: ಸಸಿಗಳನ್ನು ಬೀಜಗಳಿಂದ ಹಾಗೂ ಇತರೆ ಕಸಿ ಮಾಡುವ ಕ್ರಮದಿಂದ ಬೆಳೆಸಬಹುದು. ಸಾಮಾನ್ಯವಾಗಿ ಬೀಜಗಳಿಂದಲೇ ಸಸಿಗಳನ್ನು ಬೆಳೆಸಲಾಗುವುದು.

ಬೀಜಗಳಿಂದ ಬೆಳೆಸುವ ಮರಗಳಲ್ಲಿ ವಿವಿಧ ಗಾತ್ರದ ಮತ್ತು ಗುಣಮಟ್ಟದ ಹಣ್ಣುಗಳು ದೊರೆಯಲಿವೆ. ಆದುದರಿಂದ ಕಸಿ ಮಾಡುವ ಕ್ರಮದಲ್ಲಿ ಬೆಳೆಸಿದರೆ ಒಂದೇ ತೆರನಾದ ಗಾತ್ರದ ಮತ್ತು ಅತ್ಯಂತ ರುಚಿಕರವಾದ ಹಣ್ಣುಗಳನ್ನು ಬೆಳೆಯಲು ಸಾಧ್ಯ. ಇದರಲ್ಲಿ ಬಡ್‌ಗಳನ್ನು ಬಳಸಿ ಸಸಿ ಮಾಡುವ ವಿಧಾನವು ಅತ್ಯಂತ ಯಶಸ್ವಿ ವಿಧಾನವಾಗಿದೆ. ಒಂದು ವರ್ಷ ಪಾಲೀ ಬ್ಯಾಗ್‌ಗಳಲ್ಲಿ ಬೆಳೆಸಿದ ಸಸಿಗಳಿಗೆ ಅತ್ಯಂತ ಉತ್ತಮ ತಳಿಯ ಮರಗಳಿಂದ ಪಡೆದ ಬಡ್‌ಗಳನ್ನು ಬಳಸಿ **“ಬಡ್ ಗ್ರಾಫ್ಟಿಂಗ್”** ಮಾಡಲಾಗುವುದು. ಇದಕ್ಕೆ ಜುಲೈನಿಂದ ಆಗಸ್ಟ್ ತಿಂಗಳುಗಳು ಪ್ರಶಸ್ತವಾದ ಸಮಯವಾಗಿರುವುದು.

ನೇರಳೆ ಮರಗಳು ಬರ ಪ್ರದೇಶದಲ್ಲೂ ಬೆಳೆಯಬಹುದಾಗಿದ್ದು, ಬರನಿರೋಧಕ ಶಕ್ತಿಯುಳ್ಳ ಮರ. ಎಂತಹದೇ ಪರಿಸರ ಪರಿಸ್ಥಿತಿಯಲ್ಲಿ, ಯಾವುದೇ ವಿಧದ ಮಣ್ಣಿನಲ್ಲಿ ಬೆಳೆಯಬಹುದಾದ ಮರ. ಇದು ಉಷ್ಣವಲಯ ಮತ್ತು ಸಮಶೀತೋಷ್ಣ ವಲಯದಲ್ಲಿ ಉತ್ತಮವಾಗಿ ಬೆಳೆಯುವುದು. ಈ ಮರವು ಹೂ ಬಿಡುವ ಮತ್ತು ಹಣ್ಣುಗಳಿರುವ ಸಮಯದಲ್ಲಿ ಒಣಹವೆಯನ್ನು ಬಯಸುವುದು. ಬೇಗನೆ ಅಂದರೆ ಪೂರ್ವ ಮುಂಗಾರು ಮಳೆ ಬಂದರೆ ಉತ್ತಮವಾದ ಬೆಳವಣಿಗೆಗೆ ಮತ್ತು ಹಣ್ಣುಗಳು ಬಲಿಯಲು ಸಹಕಾರಿಯಾಗುವುದು. ಎಳೆಯ ಗಿಡಗಳು ಫ್ರಾಸ್ಟ್ (ಇಬ್ಬನಿ) ತಡೆದುಕೊಳ್ಳಲಾರವು.

**ನೆಡುತೋಪಿನ ನಿರ್ವಹಣೆ:** ನೇರಳೆ ಮರಗಳನ್ನು ವಿವಿಧ ಬಗೆಯ ಮಣ್ಣುಗಳಲ್ಲಿ ಬೆಳೆಯಬಹುದು. ಅಂದರೆ ಉಪ್ಪಿನಂಶ ಹೆಚ್ಚಿರುವ ಮಣ್ಣಿನಲ್ಲಿ, ನೀರು ಬಸಿಯದ ಜೌಗು ಪ್ರದೇಶಗಳಲ್ಲಿ ಮತ್ತು ಕ್ಯಾಲ್ಸಿಯಂನ ಗಟ್ಟಿ ಪದರವಿರುವ ಭೂಮಿಯಲ್ಲಿ ಬೆಳೆಯಬಹುದು. ಕಾರಣ ಇದರ ತಾಯಿ ಬೇರು ಆಳವಾಗಿ ಹೋಗುವುದರಿಂದ ಎಂತಹ ಮಣ್ಣುಗಳಲ್ಲಾದರೂ ಬೆಳೆಯಲು ಸಾಧ್ಯ. ಆದರೆ ಆಳ ಮಣ್ಣಿನಲ್ಲಿ ಮತ್ತು ಚೆನ್ನಾಗಿ ನೀರು ಬಸಿಯುವ ಭೂಮಿ ಶ್ರೇಷ್ಠವಾದದ್ದು. 1 ಮೀಟರ್ X 1 ಮೀಟರ್ X 1 ಮೀಟರ್ ಆಳದ ಗುಂಡಿಗಳನ್ನು 10 ಮೀಟರ್ X 8 ಮೀಟರ್ ಸ್ಥಳಾವಕಾಶದೊಂದಿಗೆ (ಅಂತರ) ಬೆಳೆಯುವುದು ಸೂಕ್ತವಾಗಿದೆ.

ಗುಂಡಿಗಳನ್ನು ಮಳೆಗಾಲಕ್ಕೆ ಮುನ್ನ ತೆಗೆಯುವುದು ಒಳ್ಳೆಯದು. ಗುಂಡಿಗಳಿಗೆ ಮೇಲ್ಭಾಗದ ಮಣ್ಣು ಮತ್ತು ಗೊಬ್ಬರವನ್ನು (ಕಾಂಪೋಸ್ಟ್) 3:1 ಅನುಪಾತದಲ್ಲಿ ತುಂಬಿಸಿ, ಜುಲೈ–ಆಗಸ್ಟ್ ತಿಂಗಳುಗಳಲ್ಲಿ ಸಸಿಗಳನ್ನು ನಾಟಿ ಮಾಡಬೇಕು. ಒಂದು ಹೆಕ್ಟೇರ್ ಭೂಮಿಯಲ್ಲಿ 100–150 ಬಡ್ ಗ್ರಾಫ್ಟಿಂಗ್ ಮಾಡಿ ಬೆಳೆಸಿರುವ ಸಸಿಗಳನ್ನು ನಾಟಿ ಮಾಡುವುದು ಉತ್ತಮ. ನೀರಾವರಿ ಸೌಲಭ್ಯವಿರುವಡೆ ಮಳೆಗಾಲಕ್ಕೆ ಮುಂಚಿತವಾಗಿ ಸಹ ನಾಟಿ ಮಾಡಬಹುದು.

**ಸಸಿಗಳ ಪ್ರೂನಿಂಗ್ ಮತ್ತು ತರಬೇತಿ:** ನಾಟಿ ಮಾಡಿರುವ ಎಳೆಯ ಸಸಿಗಳಿಗೆ ತರಬೇತಿ ಮಾಡಿದಲ್ಲಿ ಒಂದು ಉತ್ತಮವಾದ ಮರವನ್ನಾಗಿಸಲು ಸಾಧ್ಯ. ಏಕೆಂದರೆ ಹೆಚ್ಚಿನ ರೆಂಬೆಗಳು ಕೈಗೆ ಎಟಕುವಂತೆ ಇರುವುದರಿಂದ ಗಿಡಗಳಿಗೆ ಔಷಧಿ ಸಿಂಪರಿಸಲು ಮತ್ತು ಹಣ್ಣುಗಳನ್ನು ಕೊಯ್ಲು ಮಾಡಲು ಸುಲಭವಾಗಲಿದೆ. ಆದರೆ ಭೂಮಟ್ಟದಿಂದ 60 ರಿಂದ 90 ಸೆಂಟಿಮೀಟರ್ ವರೆಗೆ ಯಾವುದೇ ರೆಂಬೆಗಳು ಬರದಂತೆ ನೋಡಿಕೊಳ್ಳಬೇಕು. ಇಲ್ಲಿ ಬೇಕಾಗಿರುವುದು ಕೆಳಗಿನ ಕೊನೆಗಳು ಮತ್ತು ಆರೋಗ್ಯಕರವಲ್ಲದ ಕೊನೆಗಳನ್ನು ತೆಗೆಯುವುದಷ್ಟೇ. ಅನಾವಶ್ಯವಾಗಿ ರೆಂಬೆಗಳನ್ನು ಕತ್ತರಿಸುವ ಅವಶ್ಯಕತೆ ಇಲ್ಲ.

**ಗೊಬ್ಬರ ಮತ್ತು ರಸಗೊಬ್ಬರ:** ಎಲ್ಲದಕ್ಕೂ ಮುಖ್ಯವಾಗಿ ಪ್ರತಿ ಗಿಡಕ್ಕೆ 20 ರಿಂದ 25 ಕೆಜಿ ಎಷ್ಟು ಕೊಟ್ಟಿಗೆ ಗೊಬ್ಬರದ ಅವಶ್ಯಕತೆ ಇದೆ. ಸಸಿಗಳು ಬೆಳೆದಂತೆ ಫಸಲು ಬಿಡಲು ಪ್ರಾರಂಭಿಸಿದಾಗ 50 ರಿಂದ 60 ಕೆಜಿ ದನದ ಗೊಬ್ಬರ ಕೊಡುವುದು ಉತ್ತಮ. ಇದನ್ನು ಮರಗಳು ಹೂ ಬಿಡುವ ಒಂದು ತಿಂಗಳು ಮುಂಚಿತವಾಗಿ ನೀಡುವುದರಿಂದ ಗೊಬ್ಬರದ ಸದ್ಬಳಕೆಯಾಗುವುದು. ಬೆಳೆದ ಮರಗಳಿಗೆ 500 ಗ್ರಾಂ ಸಾರಜನಕ (N), 600 ಗ್ರಾಂ ಪಾಸ್ಪರಸ್



(P) ಮತ್ತು 300 ಗ್ರಾಂ ಪೊಟ್ಯಾಶ್ (K) ರಸಗೊಬ್ಬರವನ್ನು ಪ್ರತಿ ಗಿಡಕ್ಕೆ ವಾರ್ಷಿಕವಾಗಿ ನೀಡಬೇಕು. ಇದನ್ನು ಮರಗಳ ಕೊಂಬೆಗಳು ಹರಡಿರುವಂತೆ ಮಣ್ಣಿನಲ್ಲಿ ಮಿಶ್ರ ಮಾಡಬೇಕು.

**ಮರಗಳ ಆರೈಕೆ:** ಹಸಿರೆಲೆ ಗೊಬ್ಬರವನ್ನು ಮಳೆಗಾಲದಲ್ಲಿ ಹಾಕಬೇಕು. ಅದೇ ರೀತಿ ಬುಡದಲ್ಲಿ ಬರುವ ರೆಂಬೆಗಳನ್ನು ಆಯಾಯ ಸಮಯಕ್ಕೆ ಅನುಗುಣವಾಗಿ ತೆಗೆಯಬೇಕು. ನಡುತೋಪನ್ನು ಕಳೆಯಿಂದ ಮುಕ್ತವಾಗಿಡಬೇಕು. ನೇರಳೆ ಮರಗಳು ಜೇನುನೊಣಗಳ ಪರಾಗಸ್ಪರ್ಶದಿಂದ ಕಾಯಿ ಬಿಡುವುದರಿಂದ, ಜೇನುಪೆಟ್ಟಿಗೆಗಳನ್ನು ನೆಡುತೋಪಿನ ಸಮೀಪದಲ್ಲಿ ಸಾಕಬೇಕಿದೆ. ಇದರಿಂದ ಉತ್ತಮ ಗುಣಮಟ್ಟದ ಮತ್ತು ಹೆಚ್ಚು ಹಣ್ಣುಗಳನ್ನು ಪಡೆಯಲು ಸಾಧ್ಯ.

**ನೀರುಣಿಸುವುದು:** ಎಳೆಯ ಗಿಡಗಳಿಗೆ ವರ್ಷದಲ್ಲಿ 6–8 ಬಾರಿ ನೀರು ಹಾಕಬೇಕು. ಇದರಿಂದ ಉತ್ತಮ ಬೆಳವಣಿಗೆ ನಿರೀಕ್ಷಿಸಬಹುದು. ಹಣ್ಣು ಬಿಡುವ ಗಿಡಗಳಿಗೆ ಸೆಪ್ಟೆಂಬರ್ ನಿಂದ ಅಕ್ಟೋಬರ್‌ವರೆಗೆ ನೀರು ಕೊಡುವುದರಿಂದ ಉತ್ತಮವಾದ ಎಳೆಯ ಕಾಯಿಗಳು ಬಿಡಲು (ಬಡ್ ಫಾರ್ಮೇಶನ್) ಮತ್ತು ಮೇ ನಿಂದ ಜೂನ್ ಅವಧಿಯಲ್ಲಿ ಹಣ್ಣುಗಳು ಬಲಿಯಲು 5–6 ಬಾರಿ ನೀರು ಕೊಡುವುದರಿಂದ ಉತ್ತಮ ಫಲಿತಾಂಶ ಪಡೆಯಬಹುದು.

**ಮಾದರಿ:** 10 ಮೀಟರ್ X 8 ಮೀಟರ್ ಅಂತರ ಆದರ್ಶವಾದ ಮಾದರಿ. ಈ ಮರವು ಸಾಮಾನ್ಯವಾಗಿ ಯಾವುದೇ ರೋಗ ಮತ್ತು ಕೀಟಗಳ ಹಾವಳಿಗೆ ತುತ್ತಾಗುವುದು ಕಡಿಮೆ.

**ಇಳುವರಿ:** ವಾರ್ಷಿಕವಾಗಿ ಪ್ರತಿ ಮರದಿಂದ 80 ರಿಂದ 100 ಕೆಜಿ ಹಣ್ಣುಗಳು ದೊರೆಯಲಿವೆ.

ಗಿಡಗಳ ಬೆಳವಣಿಗೆ ಮತ್ತು ಹಣ್ಣು ಬಿಡುವ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಂಡು 10 ರಿಂದ 15 ವರ್ಷಗಳಿಗೊಮ್ಮೆ ಮರಗಳನ್ನು ತೆರವುಗೊಳಿಸಬಹುದು.

**ಲೇಖಕರ ಸಂಪರ್ಕಕ್ಕಾಗಿ:**
**ಮೊ: 9448126246**
**shivanandamurthyifs@gmail.com**

# 81ರ ಹರೆಯದ ದಣಿವರಿಯದ ಧೀಮಂತ ತೋಟಗಾರಿಕಾ ಕೃಷಿಕ ವಿಜ್ಞಾನಿ, ಡಾ ನಾಗದಾಸನಹಳ್ಳಿ ಚಿಕ್ಕ ಕೆಂಪಯ್ಯ ಪಟೇಲರು



**ಡಾ. ಚಂದ್ರಶೇಖರ ಮ ಬಿರಾದಾರ,** ಸಿ.ಎಂ.ಡಿ. ಗ್ಲೋಬಲ್ ಗ್ರೀನ್ ಗ್ರೋಥ್

ಹಲವಾರು ವಿಜ್ಞಾನಿಗಳು ತಮ್ಮ ಕಲಿಕೆಯಿಂದ ತನ್ನ ಅವಿರತ ಶ್ರಮ ಹಾಗೂ ಶ್ರದ್ಧೆಯಿಂದ ವಿಜ್ಞಾನಿಯಾಗುವುದು ಸಹಜ ಆದರೆ ಕೃಷಿಕರು ವಿಜ್ಞಾನಿಗಳಾಗುವುದು ವಿರಳ ಅಂತಹವರಲ್ಲಿ ಕೃಷಿಕ ವಿಜ್ಞಾನಿಗಳಾದ ಡಾ. ಎನ್.ಸಿ. ಪಟೇಲರು ಅಗ್ರ ಪಂಕ್ತಿಯಲ್ಲಿ ನಿಲ್ಲುತ್ತಾರೆ. ಇವರು ಒಬ್ಬ ಕೃಷಿಕ ತೋಟಗಾರಿಕಾ ಪರಿಣತ. ತನ್ನ ಅವಿರತ ಪರಿಶ್ರಮದಿಂದ ಏನೆಲ್ಲ ಸಾಧಿಸಬಹುದೆಂಬುದಕ್ಕೆ ಒಂದು ಜೀವಂತ ನಿದರ್ಶನ ಹಾಗೂ ಯುವಕರಿಗೆ ಮಾದರಿ. 1944 ರಲ್ಲಿ ದಿವಂಗತ ಚಿಕ್ಕಕೆಂಪಯ್ಯ ಹಾಗೂ ಮುನಿಯಮ್ಮ ದಂಪತಿಗಳಿಗೆ ನಾಗದಾಸನಹಳ್ಳಿಯಲ್ಲಿ ಜನಿಸಿದ ಇವರು ಬಿ.ಎ. ಎಂ.ಎ. ಹಾಗೂ ಕಾನೂನು ಪದವಿಧರರು. ಅಂದಿನ ಕಾಲದಲ್ಲಿ ಇಷ್ಟು ಪದವಿ ಹೊಂದಿದ್ದರೂ ಯಾವ ಸರಕಾರಿ ಕೆಲಸಕ್ಕೆ ಸೇರದೆ ತಮ್ಮ ತಂದೆಯವರು ಕೈಗೊಂಡ ಕೃಷಿ ಕಾಯಕದಲ್ಲಿ ತಮ್ಮನ್ನೇ ತೊಡಗಿಸಿಕೊಂಡು ಅಪ್ರತಿಮ ಸಾಧನೆಗೈದ ರೈತ. ಕೃಷಿಯ ಹಲವಾರು ಆಯಾಮಗಳಾದ ಪಶುಸಂಗೋಪನೆ, ಹನಿ ನೀರಾವರಿ, ದ್ರಾಕ್ಷಿ ಬೇಸಾಯ, ಮಾವು ಬೇಸಾಯ ಮುಂತಾದ ತೋಟಗಾರಿಕಾ ಬೆಳೆಗಳನ್ನು ಬೆಳೆದು ಹೊಸ ಹೊಸ ಆವಿಷ್ಕಾರಗಳನ್ನು ಮಾಡಿದ ಮೇಧಾವಿ ತೋಟಗಾರಿಕಾ ರೈತ ತಜ್ಞ. ಇವರು ಪರಿಣತಿ ಸಾಧಿಸಿದ ತೋಟದ ಬೆಳೆಗಳೆಂದರೆ ಮಾವು, ದ್ರಾಕ್ಷಿ, ನೇರಳೆ, ಸೇಬು, ಅವಕಾಡೋ, ಹಲಸು, ಚಕೋತಾ ಮುಂತಾದವುಗಳು. ಈ ಬೆಳೆಗಳಲ್ಲಿ ನಿರಂತರ ಅಧ್ಯಯನ ನಡೆಸಿ ಹಲವಾರು ಪ್ರಭೇದಗಳನ್ನು ಬೆಳೆದು ಅವುಗಳಲ್ಲಿನ ವಿವಿಧತೆಯನ್ನು ಕೂಲಂಕುಶವಾಗಿ ಅಧ್ಯಯನಿಸಿ ಅವುಗಳಲ್ಲಿ ಅತ್ಯುತ್ತಮ ತಳಿಗಳನ್ನು ಗುರುತಿಸಿ, ಸಸಿ ಉತ್ಪಾದಿಸಿ ರೈತರಿಗೆ ಪರಿಚಯಿಸಿದ ಹೆಗ್ಗಳಿಕೆ ಇವರದು. **ನೇರಳೆಯಲ್ಲಿ "ಪಟೇಲ ಜಂಬೋ", ಕೋಳುರು ಸ್ಪೆಶಲ್ ಹೊಸತಳಿಗಳು, ಅವಕಾಡೋದಲ್ಲಿ "ಪಟೇಲ್ ಪ್ರಾಲಿಫಿಕ್" ಹಲಸಿನಲ್ಲಿ "ವಿಯಟ್‌ನಾಮ್ ಸೂಪರ್ ಅರ್ಲಿ"** ತಳಿಗಳನ್ನು ಗುರುತಿಸಿ ಸಸಿ ತಯಾರಿಸಿ ಇತರೆ ರೈತರಿಗೆ ಯಾವ ಫಲಾಪೇಕ್ಷೆಯಿಲ್ಲದೆ ವಿತರಿಸಿ ಜನಪ್ರಿಯಗೊಳಿಸಿರುವುದು ಇವರ ಸಾಧನೆ. ಯಾವುದೇ ಪರಿಣಿತ ವಿಜ್ಞಾನಿಗೆ ಕಡಿಮೆ ಇಲ್ಲದ ಇವರ ಒಣ ಭೂಮಿಯಲ್ಲಿನ ತೋಟಗಾರಿಕೆ ಸಾಧನೆ ಹಲವಾರು ರೈತರಿಗೆ ಮಾದರಿಯಾಗಿ ದಾರಿದೀಪವಾಗಿದೆ. ಇವರು ಕಳೆದ ಸುಮಾರು ಐದೂವರೆ ದಶಕಗಳಿಂದ ತೋಟಗಾರಿಕೆಯಲ್ಲಿನ ತಮ್ಮ ಹಲವಾರು ಆವಿಷ್ಕಾರಗಳಿಂದ ಎಲ್ಲಾ ರೈತರಲ್ಲೂ ಜನಪ್ರಿಯರಾಗಿರುವುದು ಇವರ ಸೇವೆಗೆ ಹಿಡಿದ ಕನ್ನಡಿ.

ಈ 81 ರ ಹರೆಯದಲ್ಲೂ ದಣಿವರಿಯದ ಪಟೇಲರು ಸದಾ ಕೃಷಿ, ತೋಟಗಾರಿಕೆ ಮುಂತಾದ ವಿಷಯದಲ್ಲಿ ತಜ್ಞರೊಂದಿಗೆ, ವಿಜ್ಞಾನಿಗಳೊಂದಿಗೆ ಹಾಗೂ ಇತರೆ ಅಧಿಕಾರಿಗಳೊಂದಿಗೆ ಸದಾ ಹೊಸ ವಿಷಯಗಳ ಕುರಿತು ಚರ್ಚಿಸಿ ತಮ್ಮ ಅನುಭವಗಳನ್ನು ಹಂಚಿಕೊಂಡು ಬೇರೆಯವರಿಗೆ ಮಾದರಿಯಾಗಿದ್ದಾರೆ.

ಇವರ ಈ ಅನ್ವೇಷಣೆ, ರೈತವರ್ಗಕ್ಕೆ ಸಲ್ಲಿಸಿದ ಸೇವೆ, ಅವಿರತ ಪರಿಶ್ರಮಿಗಳನ್ನು ಗುರುತಿಸಿ ಸರ್ಕಾರವು 1992 ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಲ್ಲದೆ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ವತಿಯಿಂದ ಪಟೇಲರಿಗೆ 2024 ರಲ್ಲಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ಈ ಗೌರವಗಳಲ್ಲದೆ ನಾಡಿನ ಹಲವಾರು ಸಂಘಸಂಸ್ಥೆಗಳು ಪಟೇಲರ ಅವಿರತ ಸೇವೆ ಹಾಗೂ ಆವಿಷ್ಕಾರಗಳನ್ನು ಗುರುತಿಸಿ ಗೌರವಿಸಿದ್ದಾರೆ. ಇದೇ ವರ್ಷ ದಿನಾಂಕ 25 ಮೇ ತಿಂಗಳಿನಲ್ಲಿ ಇವರಿಗೆ ಸಮಾಜ ಸೇವಾ ಪ್ರಶಸ್ತಿ ಪ್ರಧಾನ ಮಾಡಲಾಗಿದೆ.

ಡಾ. ಎನ್ ಸಿ, ಪಟೇಲರ ತೋಟಗಾರಿಕೆಯಲ್ಲಿನ ಹಲವಾರು ಆವಿಷ್ಕಾರಗಳನ್ನು ರೈತರ ಬಗ್ಗೆ ಇವರಿಗೆ ಇರುವ ಅಪಾರ ಪ್ರೀತಿಯನ್ನು ಇತರರಿಗೆ ಪರಿಚಯಿಸುವ ಒಂದು ಸಣ್ಣ ಪ್ರಯತ್ನವನ್ನು ಈ ಲೇಖನದ ಮೂಲಕ ಮಾಡಲಾಗಿದೆ.



## ಡಾ. ಎನ್.ಸಿ ಪಟೇಲರ ಸಾಧನೆಗಳ ಒಂದು ಪಕ್ಷಿನೋಟ

**ಒಣಭೂಮಿಯ ವರದಾನ: ಜಾಮೂನಿನ ಜೀವಂತ ದೀಪ್ತಿ: ಜಾಮೂನಿನಿಂದ (ನೇರಳೆ) ಹಸಿರು ಜೀವನ ಕಟ್ಟಿಕೊಂಡ ರೈತ ವಿಜ್ಞಾನಿ**

ರೈತ ವಿಜ್ಞಾನಿ ಡಾ. ನಾಗದಸನಹಳ್ಳಿ ಸಿ. ಪಟೇಲ್ ಅವರ ಮರ ಆಧಾರಿತ ಆಹಾರ ವ್ಯವಸ್ಥೆ ಹಾಗೂ ಫಲವತ್ತಾದ ತೋಟಗಳಿಗೆ ನೀಡಿದ ನಮ್ಮ ಭೇಟಿಯು

ಪ್ರೇರಣಾದಾಯಕವಾದ ಅನುಭವವಾಯಿತು. ಇದು ಪುನರುಜ್ಜೀವನ ಮರ ಆಧಾರಿತ ತೋಟಗಾರಿಕೆಯ ಹೃದಯವನ್ನು ತಲುಪುವ ಪ್ರಯಾಣವಾಗಿತ್ತು, ಅವರು ಜಾಮೂನು, ನೇರಳೆ ಹಣ್ಣು (Syzygium cumini), ಮಾವು ಬೆಳೆಗಳಿಗಾಗಿ ಹಾಕಿದ ದೃಷ್ಟಿಕೋನ ಮತ್ತು ಸಂಶೋಧನೆಗಳು ಒಣಭೂಮಿ ಹಾಗೂ ಮಳೆಯಾಧಾರಿತ ಪ್ರದೇಶಗಳಲ್ಲಿ ಮರ ಆಧಾರಿತ ಹಣ್ಣು ಬೆಳೆ ಮಾದರಿಗಳ ಪರಿವರ್ತನೆಯ ಸಾಕ್ಷಿಯಾಗಿವೆ.

ಅವರ ತೋಟದಲ್ಲಿ ಮೂರು ಅತ್ಯುತ್ತಮ, ಹೆಚ್ಚು ಉಳಿತಾಯದ ಜಾಮೂನು (ನೇರಳೆ) ತಳಿಗಳನ್ನು ತಾವೇ ಸ್ವತಃ ಅಭಿವೃದ್ಧಿಪಡಿಸಿರುವ **"ಕೃಷಿಕ ವಿಜ್ಞಾನಿ ರೈತ"**. ಈ ತಳಿಗಳ ವಿಶಿಷ್ಟತೆ ಎಂದರೆ, ಪ್ರತಿ ತಿಂಗಳು ಒಂದೊಂದು ತಳಿ ಜೂನ್ ತಿಂಗಳಿಂದ ಆಗಸ್ಟ್‌ವರೆಗೆ ಹಣ್ಣು ಕೊಡುತ್ತದೆ. ಇದು ನಿರಂತರ ಬೆಳೆಯುವಿಕೆ, ಸ್ಥಿರವಾದ ಮಾರುಕಟ್ಟೆ ಪೂರೈಕೆ ಹಾಗೂ ಚರಿತ್ರಾತ್ಮಕ ಆದಾಯವನ್ನು ಖಚಿತಪಡಿಸುತ್ತದೆ.

**ದಾನಶೀಲ ಕೃಷಿಕ ವಿಜ್ಞಾನಿ**

ಅವರ ಮನಸ್ಸಿನ ಉಜ್ವಲತೆ ನನ್ನ ಹೃದಯಕ್ಕೆ ಸ್ಪರ್ಶಿಸಿತು. ಅವರು ತಮ್ಮ ಅನನ್ಯ ನಾಟಿ ವಸ್ತುಗಳನ್ನು ಯಾವುದೇ ಪರವಾನಗಿ, ರಾಯಲ್ಟಿ ಅಥವಾ ನಿಯಮವಿಲ್ಲದೆ ತೋಟಗಾರಿಕೆ ವಿಶ್ವವಿದ್ಯಾಲಯಗಳು, ನರ್ಸರಿಗಳು ಹಾಗೂ ಸಹ ರೈತರಿಗೆ ಉಚಿತವಾಗಿ ಹಂಚುತ್ತಿದ್ದಾರೆ. ಪೇಟೆಂಟ್ ಮತ್ತು ಲಾಭದ ವಿಶ್ವದಲ್ಲಿ, ಅವರು ನಿಜವಾದ ಅನ್ನದಾತ ಎಂಬ ರೀತಿಯಲ್ಲಿ ಹೆಜ್ಜೆ ಇಡುತ್ತಿದ್ದಾರೆ. **"ರೈತನದು ನೀಡುವ ಕೈಯಾಗಿದೆ, ಬೇಡುವ ಕೈ ಅಲ್ಲ"**. ಈ ಧರ್ಮಬದ್ಧ ಸೇವಾ ಮನೋಭಾವಕ್ಕಾಗಿ ಡಾ. ಎನ್.ಸಿ. ಪಟೇಲ್ ಮತ್ತು ಅವರ ಪುತ್ರ ಪ್ರದೀಪ್ ಪಟೇಲ್ ಅವರಿಗೆ ನಮನಗಳನ್ನು ಸಲ್ಲಿಸುತ್ತೇನೆ.

**ಜಾಮೂನು/ನೇರಳೆ ಕೃಷಿಯನ್ನು ಒಣಭೂಮಿಯ ವರದಾನವನ್ನಾಗಿಸಿದ ಅಪ್ರತಿಮ ರೈತ**

ಡಾ. ಪಟೇಲ್ ತೋರಿಸಿರುವುದು ಜಾಮೂನು/ನೇರಳೆ ಕೇವಲ ಮರವಲ್ಲ, ಅದು ಒಣಭೂಮಿಗೆ ಪ್ರಕೃತಿಯ ಒಂದು ವಿಶಿಷ್ಟ ಕೊಡುಗೆ. ಆರಂಭಿಕ ವರ್ಷಗಳಲ್ಲಿ ಕನಿಷ್ಠ ರಕ್ಷಣೆಯೊಂದಿಗೆ ನೆಟ್ಟರೆ, ಜಾಮೂನು/ನೇರಳೆ ಮರಗಳು ನೀರಾವರಿ ಅಥವಾ ರಾಸಾಯನಿಕ ಬಳಕೆಯಿಲ್ಲದೆ ನೈಸರ್ಗಿಕವಾಗಿ ಚಿರಸ್ಥಾಯಿಯಾಗಿ ಬೆಳೆಯುತ್ತವೆ. ಇವರು ತೋರಿಸಿರುವ ಮಾದರಿಯ ಪ್ರಕಾರ, ಪ್ರಕೃತಿ ಆಧಾರಿತ ಕೃಷಿಯಿಂದ ಪ್ರತಿ ಎಕರೆ ರೂ.2–3 ಲಕ್ಷಗಳಷ್ಟು ಆದಾಯವನ್ನು ಯಾವುದೇ ನಿರ್ವಹಣೆಯಿಲ್ಲದೆ ಗಳಿಸಬಹುದಾಗಿದೆ.

ಸಾವಯವ ಕೃಷಿಯ ಸ್ಫೂರ್ತಿ ಕರ್ನಾಟಕದ ಸಾವಯವ ಕೃಷಿಯ ನಾವೀನ್ಯತೆಯೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ಹೆಸರು ಎಂದರೆ ಡಾ. ನಾಗದಸನಹಳ್ಳಿ ಸಿ. ಪಟೇಲ್. ಅವರು **"ಮಲ್ಲಿಕಾ" ಮಾವು, "ಬೆಂಗಳೂರಿನ ಬ್ಲೂ ದ್ರಾಕ್ಷಿ"** ತಳಿಗಳನ್ನು ಜನಪ್ರಿಯಗೊಳಿಸಿ ಬತ್ತಲಾದ ಭೂಮಿಗಳನ್ನು ಲಾಭದಾಯಕ ಹಣ್ಣಿನ ತೋಟಗಳಾಗಿ ಪರಿವರ್ತಿಸಿದ್ದಾರೆ. ಅವರ ಯಶಸ್ಸು ಮಾತ್ರವಲ್ಲ, ಅವರ ಕೆಲಸ ಸಾವಿರಾರು ರೈತರಿಗೆ ಪ್ರೇರಣೆಯಾಗಿದೆ.

**ರೈತರೂ ಡಾಕ್ಟರೇಟ್ ಪಡೆಯಬಹುದು! ಎಂಬುದಕ್ಕೆ ಜೀವಂತ ಉದಾಹರಣೆ**

ಅವರ ಜೀವಮಾನದ ಕೃಷಿ ಸೇವೆಗಾಗಿ ಕೃಷಿ ವಿಶ್ವವಿದ್ಯಾಲಯ (UAS) ಬೆಂಗಳೂರು ಅವರಿಗೆ ಗೌರವ ಡಾಕ್ಟರೇಟ್ ನೀಡಿದೆ. ಇದು ರೈತ ಸಮಾಜದಲ್ಲಿ ಇವರ ದಿಟ್ಟ ನೇತೃತ್ವಕ್ಕೆ ನೀಡಿದ ಯೋಗ್ಯ ಗೌರವವಾಗಿದೆ. ಇಂದು ಅವರು ಕೇವಲ ಯಶಸ್ವಿ ರೈತನಷ್ಟೇ ಅಲ್ಲ, ಬದಲಾವಣೆಯ ಗುರು, ನಿದರ್ಶನವಾದ ಶಿಕ್ಷಕ, ಕೃಷಿಯಲ್ಲಿ ಕ್ರಾಂತಿಯ ಬೀಜ ಬಿತ್ತಿದ ವ್ಯಕ್ತಿಯಾಗಿ ನಿಲ್ಲುತ್ತಾರೆ.

ಬನ್ನಿ, ನಾವು ಈ ಜೀವಂತ ಪರಂಪರೆಯನ್ನು ಉತ್ಸವದಂತೆ ಆಚರಿಸಿ, ಡಾ. ಎನ್.ಸಿ. ಪಟೇಲ್ ಅವರ ಯಶೋಗಾಥೆಗಳನ್ನು ನಮ್ಮ ಕೃಷಿಭೂಮಿಗಳಲ್ಲಿ ಹಸಿರು ಬೆಳವಣಿಗೆಗೆ ಹೆಜ್ಜೆ ಹಾಕುವ ನಿಟ್ಟಿನಲ್ಲಿ ಮುಂದುವರಿಸೋಣ.

**ಲೇಖಕರ ಸಂಪರ್ಕಕ್ಕಾಗಿ:**
**ಮೊ: 7319132666**
**c.biradar@gggc.co**



**ಡಾ. ಎನ್.ಸಿ. ಪಟೇಲ್ ರವರಿಗೆ ಕೃಷಿಅರಣ್ಯ ರೈತರ ಆಶಾಕಿರಣ ವಿಶೇಷ ಸಂಚಿಕೆಯನ್ನು ನೀಡಲಾಯಿತು.**

# ಅನ್ನದ ಬಟ್ಟಲು ಈ ತದ್ರೂಪಿ ಕಾಡು ಇದು ದೊಡ್ಡಮಗ್ಗೆಯ ಸಹ್ಯಾದ್ರಿ

**ಬಂಗಾರದ ಮನುಷ್ಯರು (ಬೆಳಕಿನ ಬೇಸಾಯದ ಕಥಾನಕ - ಪುಸ್ತಕದಿಂದ)**

**– ಚಿನ್ನಸ್ವಾಮಿ ವಡ್ಡಗೆರೆ**



ಮಳೆಯ ಕಾಡುಗಳು ಕಣ್ಮರೆಯಾಗುತ್ತಿವೆ. ಮೋಡಗಳನ್ನು ತಡೆದು ಮಳೆ ಸುರಿಸಬೇಕಿದ್ದ ಮರಗಳನ್ನು ಕಡಿದು ಬಯಲುಮಾಡಿದ ಪರಿಣಾಮ ಮತ್ತೆ ಮತ್ತೆ ಭೀಕರ ಬರಗಾಲ ಎದುರಾಗಿ ನಿಂತ ನೆಲವೇ ಬೆಂಕಿಯ ಚೆಂಡಂತಾದ ಅನುಭವ.

ಬಿಸಿ ಪ್ರಳಯದ ಬಗ್ಗೆ ವಿಜ್ಞಾನಿಗಳು ಎಚ್ಚರಿಸುತ್ತಲೇ ಬಂದಿದ್ದಾರೆ. ಅರಣ್ಯಗಳನ್ನು ಹೇರಳವಾಗಿ ಬೆಳೆಸಬೇಕು ಎಂದು ತಜ್ಞರು ಹೇಳುತ್ತಿದ್ದಾರೆ. ಆಹಾರದ ಅಭಾವ ಒಂದೆಡೆ. ಅರಣ್ಯಗಳನ್ನು ಬೆಳೆಸಲೇಬೇಕಾದ ಅನಿವಾರ್ಯತೆ ಮತ್ತೊಂದೆಡೆ. ಇಂತಹ ಅಡಕತ್ತರಿಯ ನಡುವೆ ಬದುಕು ಸಿಲುಕಿದೆ. ಇಂತಹ ಸವಾಲನ್ನು ಎದುರಿಸಿ ಬಯಲು ಪ್ರದೇಶದಲ್ಲಿ ಬೃಹತ್ ಕಾಡು ಬೆಳೆಸಿ ಅನ್ನದ ಬಟ್ಟಲಾಗಿಸಿದ “ಬಂಗಾರದ ಮನುಷ್ಯ” ದೊಡ್ಡಮಗ್ಗೆಯ ಡಾ. ಎಂ.ಸಿ. ರಂಗಸ್ವಾಮಿ.

ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕು ದೊಡ್ಡಮಗ್ಗೆ ಎಂಬ ಬಯಲು ನಾಡಿನಲ್ಲಿ ಅವರು ಸೃಷ್ಟಿಸಿದ ಹಸಿರು ಕಾನನ (ಕಾಡು) ನಿತ್ಯಹರಿದ್ವರ್ಣ ಕಾಡನ್ನು ನೆನಪಿಗೆ ತರುತ್ತದೆ. ಮೈಸೂರು ಮಹಾರಾಜ ಕಾಲೇಜಿನಲ್ಲಿ (1978–79) ಬಿ.ಎ. ಪದವಿ ವ್ಯಾಸಂಗ ಮಾಡುತ್ತಿರುವಾಗಲೇ ಕೃಷಿ ಮಾಡಬೇಕೆಂಬ ಕನಸು ಕಂಡ ಡಾ. ಎಂ.ಸಿ. ರಂಗಸ್ವಾಮಿ ಐದು ನೂರು ಎಕರೆ ಪ್ರದೇಶದಲ್ಲಿ ತದ್ರೂಪಿ ಕಾಡು ಬೆಳೆಸುವ ಮೂಲಕ ಕಂಡ ಕನಸನ್ನು ಸಾಕಾರ ಮಾಡಿಕೊಂಡಿದ್ದಾರೆ.

“ಓದುವಾಗಲೇ ತಾನೊಬ್ಬ ದೊಡ್ಡ ಕೃಷಿಕನಾಗಬೇಕು. ತಮ್ಮಂದಿರ ಉನ್ನತ ವ್ಯಾಸಂಗಕ್ಕೆ ನೆರವಾಗಬೇಕು ಎಂದುಕೊಂಡಿದ್ದೆ ಅದನ್ನು ಸಾಕಾರ ಮಾಡಿಕೊಂಡ ತೃಪ್ತಿ ನನ್ನದು” ಎಂದು ಹೇಳುವಾಗ ರಂಗಸ್ವಾಮಿ ಅಂದುಕೊಂಡಿದ್ದನ್ನು ಸಾಧಿಸುವ ಛಲಗಾರನಂತೆ ಕಾಣುತ್ತಾರೆ.

ಶ್ರೀ ಎಂ.ಜೆ. ತಿಮ್ಮೇಗೌಡ ಮತ್ತು ಶ್ರೀಮತಿ ಲಕ್ಷಮ್ಮ ದಂಪತಿಯ ನಾಲ್ವರು ಪುತ್ರರಲ್ಲಿ ಎಂ.ಸಿ. ರಂಗಸ್ವಾಮಿ ಹಿರಿಯವರು. ಒಬ್ಬ ನಾಗರಾಜು ಎಂಬ ಸಹೋದರರು ವ್ಯವಹಾರ ನೋಡಿಕೊಳ್ಳುತ್ತಾರೆ.

ರಂಗಸ್ವಾಮಿ ಪುತ್ರನೊಬ್ಬ ಐ.ಆರ್.ಎಸ್ ಮಾಡಿಕೊಂಡು ಕಸ್ಟಮ್ಸ್‌ನಲ್ಲಿ ಉನ್ನತ ಅಧಿಕಾರಿಯಾಗಿದ್ದಾರೆ, ಮತ್ತೊಬ್ಬ ಲಂಡನ್‌ನಲ್ಲಿ ಎಂ.ಬಿ.ಎ. ಮಾಡಿಕೊಂಡು ತೆಲಂಗಾಣದಲ್ಲಿ ಕಂಪನಿಯೊಂದಕ್ಕೆ ಅಡ್ವೈಸರ್ ಆಗಿ



ಕೆಲಸ ಮಾಡುತ್ತಿದ್ದಾರೆ. ಹೀಗೆ ಮನೆಯವರೆಲ್ಲ ಉನ್ನತ ವ್ಯಾಸಂಗ ಮಾಡಿ ದೊಡ್ಡ ಹುದ್ದೆಯಲ್ಲಿದ್ದಾರೆ. ಆದರೂ ಅವರ ಹಸಿರು ಪ್ರೀತಿ ಬೆಟ್ಟದಷ್ಟಿದೆ. ನಿರಂತರ ಹೋರಾಟದ ಬದುಕು ನಮ್ಮದು ಎನ್ನುವ ರಂಗಸ್ವಾಮಿ ಅವರಿಗೆ ಸರಳತೆ, ಸಜ್ಜನಿಕೆಯಂತೂ ಹುಟಿನಿಂದಲೇ ಬಂದಿದೆ.

ನೈಸರ್ಗಿಕ ಕೃಷಿಗೆ ಹೆಚ್ಚು ಆದ್ಯತೆ ನೀಡಲಾಗಿದ್ದು, ನೂರು ಎಕರೆ ಪ್ರದೇಶದಲ್ಲಿ ಅರವತ್ತು ಸಾವಿರ ಅಡಿಕೆ ಮರ, 2000 ತೆಂಗು, ಐವತ್ತು ಎಕರೆಯಲ್ಲಿ ತಾಳೆ, ಮೂವತ್ತೈದು ಎಕರೆಯಲ್ಲಿ ಏಲಕ್ಕಿ, ನಲವತ್ತು ಸಾವಿರ ಶ್ರೀಗಂಧ, ಐವತ್ತು ಸಾವಿರ ಹೆಬ್ಬೇವು, ಹತ್ತು ಸಾವಿರಕ್ಕೂ ಹೆಚ್ಚು ತೇಗ, ಮೆಣಸು, ಅಗರ್‌ವುಡ್, ಲವಂಗ, ಜಾಯಿಕಾಯಿ, ಮಾವು, ಸಪೋಟ, ಮೂಸಂಬಿ, ನಿಂಬೆ, ಹಲಸು, ನೇರಳೆ, ಚಕ್ಕೆ ಹೀಗೆ ಹತ್ತು ಹಲವು ಬಗೆಯ ಸಾಂಬಾರ ಮತ್ತು ಹಣ್ಣಿನ ಗಿಡಗಳು ಈ ತದ್ರೂಪಿ ಕಾಡಿನಲ್ಲಿ ಬೆಳೆಯಲಾಗಿದೆ.

ಪಶುಪಾಲನೆಯಲ್ಲಿಯೂ ಸಾಧನೆ ಮಾಡಿದ್ದು, 180 ಹಸುಗಳು, 50 ಎಮ್ಮೆಗಳು, 200ಕ್ಕೂ ಹೆಚ್ಚು ಕುರಿಗಳು, ಮೀನು ಸಾಕಾಣಿಕೆ ಎಲ್ಲಾ ಸೇರಿ ಸಮಗ್ರ–ಸುಸ್ಥಿರ ಕಾಡುಕೃಷಿಗೆ ಒಂದಕ್ಕೊಂದು ಪೂರಕವಾಗಿ ಆರ್ಥಿಕ ಸದೃಢತೆಗೆ ಸಹಕಾರಿಯಾಗಿವೆ. ಆರು ಬೃಹತ್ ಕೆರೆಗಳನ್ನು ನಿರ್ಮಾಣ ಮಾಡಲಾಗಿದೆ. ಅಲ್ಲಲ್ಲಿ ಚೆಕ್ ಡ್ಯಾಮ್‌ಗಳನ್ನು ಕಟ್ಟಲಾಗಿದೆ. ತೆರೆದ ಬಾವಿಗಳು ಮತ್ತು ನಲವತ್ತು ಬೋರ್‌ವೆಲ್‌ಗಳಿವೆ. ಐದು ನೂರು ಎಕರೆಯಲ್ಲಿ ಎಲ್ಲೂ ಜಮೀನನ್ನು ಖಾಲಿ ಬಿಡದೆ ಎಲ್ಲವನ್ನೂ ಯೋಜಿಸಿ, ಚಿಂತಿಸಿ ಗಿಡಗಳನ್ನು ನೆಡಲಾಗಿದೆ. ನೂರಕ್ಕೂ ಹೆಚ್ಚು ಎರೆಗೊಬ್ಬರ ಘಟಕಗಳನ್ನು ನಿರ್ಮಾಣ ಮಾಡಿಕೊಂಡಿದ್ದಾರೆ.

ಗಿಡಮರಗಳಿಗೆ ಹನಿ ನೀರಾವರಿ, ಸ್ಪಿಂಕ್ಲರ್ ವಿಧಾನದಲ್ಲಿ ನೀರು ಕೊಡಲಾಗುತ್ತದೆ. ಅದಕ್ಕಾಗಿ ಅಲ್ಲಲ್ಲಿ ಬೃಹತ್ ಜನರೇಟರ್‌ಗಳು ಇವೆ. ವಿದ್ಯುತ್‌ಗಾಗಿ ಪ್ರತ್ಯೇಕ ಎಂಯು ಸ್ಟೇಷನ್ ಮಾಡಿಕೊಂಡು ಎಕ್ಸ್‌ಪ್ರೆಸ್ ಲೇನ್ ಮೂಲಕ ಪ್ರತ್ಯೇಕ ಫೀಡರ್ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಪ್ರತಿದಿನ ಇನ್ನೂರಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಾರೆ.

ಇದಕ್ಕಾಗಿ ಅವರಿಗೆ ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾನಿಲಯ 2009 ರಲ್ಲಿ ನಡೆದ ಜಾನುವಾರು, ಕುಕ್ಕುಟ, ಮತ್ಸ್ಯ ಮೇಳದಲ್ಲಿ ಕೃಷಿ ಸಾಧನೆಯನ್ನು ಗುರುತಿಸಿ ಅಭಿನಂದಿಸಿದೆ. 2011 ರಲ್ಲಿ ನ್ಯಾಷನಲ್ ಡೈರಿ ಫಾರ್ಮರ್ ಅವಾರ್ಡ್, ಎರಡು ಬಾರಿ ಕೇಂದ್ರ ತಂಬಾಕು ಮಂಡಳಿಯು ಎಂ.ಸಿ. ರಂಗಸ್ವಾಮಿ ಅವರನ್ನು ಗೌರವಿಸಿದೆ. ಬೆಂಗಳೂರಿನ ಫಲದಾ ಆರ್ಗ್ಯಾನಿಕ್ ಸಂಸ್ಥೆಯವರು ಏಲಕ್ಕಿ ತೋಟಕ್ಕೆ ಸಾವಯವ ದೃಢೀಕರಣ ನೀಡಿದ್ದಾರೆ.

ಮಲೆನಾಡು ಪಶ್ಚಿಮ ಘಟ್ಟದವರಿಗೆ ಕಾಡು ಬೆಳೆಸುವುದು ಹೊಸದಲ್ಲ. ಅಲ್ಲಿ ಸಾವಿರಾರು ಎಕರೆಯುಳ್ಳ ಕಾಫಿ ಪ್ಲಾಂಟರ್ ಇರಬಹುದು. ಮರಗಳು ನೈಸರ್ಗಿಕವಾಗಿ ಬೆಳೆಯುತ್ತವೆ. ಸಿಲ್ವರ್, ರಬ್ಬರ್, ಅಕೇಶಿಯಾದಂತಹ ಏಕ ಸಸ್ಯ ಜಾತಿಗಳನ್ನು ಬೆಳೆಯಲಾಗುತ್ತದೆ. ಸಮವಸ್ತ್ರ ಧರಿಸಿ ಕವಾಯತು ಮಾಡುತ್ತಿರುವ ಹಸಿರು ಸೇನೆಯಂತೆ ಕಾಣುತ್ತದೆ. ಆದರೆ ಎಂ.ಸಿ. ರಂಗಸ್ವಾಮಿ ಅವರು ಬಯಲು ನಾಡಿನಲ್ಲಿ

ಎಲ್ಲಾ ರೀತಿಯ ಸಸ್ಯವರ್ಗಗಳನ್ನು ಬೆಳೆಯುವ ಮೂಲಕ ಜೀವ ವೈವಿಧ್ಯತೆಯನ್ನು ಕಾಪಾಡಿಕೊಂಡಿದ್ದಾರೆ. ನವಿಲುಗಳು, ಚಿಟ್ಟೆಗಳು, ಬಣ್ಣ ಬಣ್ಣದ ಹಕ್ಕಿಗಳು, ನೂರಾರು ಬಗೆಯ ಕೀಟಗಳು ಎಲ್ಲವೂ ಇಲ್ಲಿ ಮನೆ ಮನೆ ಮಾಡಿಕೊಂಡಿವೆ.

ಮನುಷ್ಯನ ಹಸ್ತಕ್ಷೇಪವಿಲ್ಲದೆ ನೈಸರ್ಗಿಕ ಕಾಡೊಂದು ಸೃಷ್ಟಿಯಾಗಲು ಕನಿಷ್ಠ 50 ರಿಂದ 100 ವರ್ಷಗಳು ಬೇಕು. ಅನಲಾಗ್ ಫಾರೆಸ್ಟ್ ಎಂದು ಕರೆಯುವ ತದ್ರೂಪಿ ಕಾಡು ಸೃಷ್ಟಿಯಾಗಲು ಐದಾರು ವರ್ಷಗಳು ಸಾಕು. ಅಂತಹ ಒಂದು ವಿಸ್ಮಯ ಇಲ್ಲಿ ಸಾಕಾರಗೊಂಡಿದೆ.

**ತದ್ರೂಪಿ ಕಾಡು**

"ಅನಲಾಗ್ ಫಾರೆಸ್ಟ್" ಅಂದರೆ ಕಾಡುತೋಟ. ಶ್ರೀಲಂಕಾ ದೇಶದ ತೋಟಗಾರಿಕೆಯಲ್ಲಿ ಕಳೆದ ಎರಡು ದಶಕಗಳಿಂದ ಸಾಕಾರಗೊಂಡಿರುವ ಹೊಸ ಕಲ್ಪನೆ. ಜಗತ್ತಿನಾದ್ಯಂತ ಹೆಸರು ಮಾಡಿದೆ. ಸುಸ್ಥಿರ ಕೃಷಿಯ ನಿಸರ್ಗ ಸಂಧಾನ. ಕಾಡು ಉಳಿಯಬೇಕು, ಕೃಷಿಯೂ ಗೆಲ್ಲಬೇಕು ಎನ್ನುವುದೇ ನಿಸರ್ಗ ಸಂಧಾನ. ಮಣ್ಣಿನ ಜೀವಂತಿಕೆ ಕಾಪಾಡಿಕೊಳ್ಳುವುದರ ಜೊತೆಗೆ ಜೀವ ವೈವಿಧ್ಯತೆಗಳಿಗೂ ಬದುಕಲು ಬಿಡುವುದು. ಬೆಂಗಾಡಿನಲ್ಲಿ ಹಸಿರು ಸಿರಿ ಬೆಳೆಸಬೇಕು.

ಭಾರತವು ಸಸ್ಯ ಮತ್ತು ಅರಣ್ಯಗಳ ಜೀವಸಿರಿಯಾಗಿದೆ. ಆಹಾರ ಮತ್ತು ಅರಣ್ಯ ಎರಡೂ ವಿಷಯಗಳಲ್ಲಿ ಸಮನ್ವಯತೆ ಸಾಧಿಸಿ ಎಂ.ಸಿ. ರಂಗಸ್ವಾಮಿ ಅವರು ಕಟ್ಟಿರುವ ಕಾಡುಕೃಷಿ ತೋಟ ನಮ್ಮ ರೈತರಿಗೆ ಮಾದರಿಯಾಗಬೇಕಿದೆ.

**ತಂಬಾಕು ಬಿಟ್ಟು ಮರ ಬೆಳೆಸಿದರು**

1995 ರಲ್ಲಿ 150 ಎಕರೆ ಪ್ರದೇಶದಲ್ಲಿ ಎಂಭತ್ತು ಸಾವಿರ ಕೆ.ಜಿ. ತಂಬಾಕು ಬೆಳೆದು ಸಾಧನೆ ಮಾಡಿದ್ದರು ಎಂ.ಸಿ. ರಂಗಸ್ವಾಮಿಯವರು. ಪರಿಸರದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸಿ ಮರ ಸುಡುವುದು ಸಾಕು ಎಂದು ತೀರ್ಮಾನಿಸಿ ಸಾವಿರ ಸಂಖ್ಯೆಯಲ್ಲಿ ಸಸಿಗಳನ್ನನು ನೆಟ್ಟರು.

ಸಸಿಗಳನ್ನು ನೆಟ್ಟ ಮೂರ್ನಾಲ್ಕು ವರ್ಷ ಅವುಗಳನ್ನು ಕಾಪಾಡಿಕೊಂಡರೆ ನಂತರ ಅವು ಹೆಮ್ಮರಗಳಾಗಿ ಬೆಳೆಯುತ್ತವೆ. ಬೇರೆ ಏನನ್ನೂ ಕೇಳುವುದಿಲ್ಲ. ದೀರ್ಘಕಾಲದಲ್ಲಿ ಅವು ಆದಾಯದ ಮೂಲಗಳಾಗುತ್ತವೆ. ನಮ್ಮ ಒಂದೊಂದು ತೇಗದ ಮರ ಈಗ ರೂಪಾಯಿ ಐವತ್ತು ಸಾವಿರ ಬೆಲೆ ಬಾಳುತ್ತದೆ. ಇದರೊಂದಿಗೆ ಪಶುಸಂಗೋಪನೆ ಮಾಡಿಕೊಂಡರೆ ಒಂದು ಸಣ್ಣ ಕುಟುಂಬ ನೆಮ್ಮದಿಯಾಗಿ ಬದುಕಬಹುದು. ಈಗ ಆಳುಕಾಳಿನ ಸಮಸ್ಯೆ ಇರುವುದರಿಂದ ಮರ ಬೆಳೆಸುವುದೊಂದೆ ನಮಗಿರುವ ಪರ್ಯಾಯ ಮಾರ್ಗ ಎನ್ನುತ್ತಾರೆ ಎಂ.ಸಿ. ರಂಗಸ್ವಾಮಿ.

ತಂಬಾಕು ಬೆಳೆಗೆ ಪರ್ಯಾಯ ಮಾರ್ಗಗಳನ್ನು ಹುಡುಕುತ್ತಿರುವ ಅಧಿಕಾರಿಗಳು ಈಗ ರಂಗಸ್ವಾಮಿ ಅವರ ಕಾಡುಕೃಷಿ ತೋಟಕ್ಕೆ ರೈತರನ್ನು ಕರೆದುಕೊಂಡು ಬಂದು ಅವರಲ್ಲಿ ಅರಿವು ಮೂಡಿಸುತ್ತಿದ್ದಾರೆ. ಆಗ್ರೋ ಫಾರೆಸ್ಟ್ರಿ (ಕೃಷಿಅರಣ್ಯ) ಕಮಿಟಿಯವರು ಬರುತ್ತಿರುತ್ತಾರೆ.

ಯಾವುದೇ ಪ್ರಚಾರವನ್ನು ಬಯಸುವುದು ಬೇಡ. ನಮ್ಮಷ್ಟಕ್ಕೆ ನಾವು ಗಿಡಮರಗಳನ್ನು ಬೆಳೆಸುತ್ತಾ ಹೋಗಬೇಕು. ಇದಕ್ಕಾಗಿ ಹಳಬರನ್ನು ನಂಬಿ ಕುಳಿತುಕೊಳ್ಳಬಾರದು. ಹೊಸತಲೆಮಾರಿನ ವಿದ್ಯಾವಂತ ಯುವಕರಿಗೆ ಕೃಷಿಯಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡುವುದನ್ನು ನಾವು ಕಲಿಸಬೇಕು. ಕಾಡು ಬೆಳೆದರೆ ನಾಡು ಬೆಳೆಯುತ್ತದೆ ಎನ್ನುವುದು ಎಂ.ಸಿ. ರಂಗಸ್ವಾಮಿಯವರ ಅನುಭವದ ಮಾತು.

**ಬೆಸ್ಟ್ ಡೈರಿ ಫಾರಂ**

180 ಹಸು, 50 ಎಮ್ಮೆ ಸಾಕಿರುವ ಎಂ.ಸಿ. ರಂಗಸ್ವಾಮಿ ಅವರು ಪ್ರತಿದಿನ 400 ಲೀಟರ್ ಹಾಲು ಉತ್ಪಾದಿಸುತ್ತಾರೆ. ತಿರುಮಲ ಡೈರಿ



ಎಂಬ ಖಾಸಗಿ ಡೈರಿಯವರು ತೋಟದ ಬಳಿಯೇ ಬಂದು ಪ್ರತಿ ಲೀಟರ್ ಹಾಲಿಗೆ ಮಾರುಕಟ್ಟೆ ದರಕ್ಕಿಂತ ರೂ.2 ಹೆಚ್ಚಿಗೆ ಕೊಟ್ಟು ಖರೀದಿಸುತ್ತಾರೆ. ಪಶುಪಾಲನೆಗೆ 50 ಎಕರೆಗೂ ಹೆಚ್ಚು ಪ್ರದೇಶದಲ್ಲಿ ಮೇವಿನ ಹುಲ್ಲು ಮತ್ತು ಮುಸುಕಿನ ಜೋಳ ಬೆಳೆದುಕೊಂಡಿದ್ದಾರೆ. ಪ್ರತಿ ದಿನ ಒಂದು ಲೋಡ್ ಟ್ರ್ಯಾಕ್ಟರ್ ಹುಲ್ಲು ದನಗಳಿಗೆ ಬೇಕಾಗುತ್ತದೆ. ದನಗಳ ತಿರುಗಾಟಕ್ಕೆ ಒಂದೆರಡು ಎಕರೆಯ ಸುತ್ತಾ ಬೇಲಿ ನಿರ್ಮಾಣ ವ್ಯವಸ್ಥೆ ಕಲ್ಪಿಸಲಾಗಿದೆ.

ದನಗಳಿಂದ ಬರುವ ಸಗಣಿಯಿಂದ ಜೈವಿಕ ಅನಿಲ ಉತ್ಪಾದನೆ ಘಟಕವನ್ನು ಸ್ಥಾಪಿಸಿಕೊಂಡಿದ್ದು, ಅದರಿಂದ ದೊರೆಯುವ ಸ್ಲರಿಯನ್ನು ಗಂಜಲ ಮತ್ತು ಅಡಿಕೆ ಸೊಪ್ಪಿನ ಜೊತೆ ಮಿಕ್ಸ್ ಮಾಡಿ ಕೊಳೆಯಿಸಿ ತೋಟಕ್ಕೆ ಬಳಸುತ್ತಾರೆ. ಅತ್ಯುತ್ತಮ ಡೈರಿ ನಿರ್ವಹಣೆಗಾಗಿ 2011 ರಲ್ಲಿ ರಾಷ್ಟ್ರೀಯ ಡೈರಿ ಅವಾರ್ಡ್ ಎ.ಸಿ. ರಂಗಸ್ವಾಮಿ ಅವರಿಗೆ ಸಂದಿದೆ.

**ಬ್ರೆಜಿಲ್ ಮಾದರಿ ಕಾಫಿ**

ತಾಳೆ ಗಿಡಗಳನ್ನು ಹಾಕಿ ಐದಾರು ವರ್ಷಗಳು ಆಗಿದೆ. ಇಳುವರಿ ಕಡಿಮೆಯಾಗಿ ಆದಾಯ ಕಡಿಮೆ ಇದೆ. ಅದಕ್ಕಾಗಿ ಎರಡು ತಾಳೆ ಗಿಡಗಳ ನಡುವೆ ಕಾಫಿ ಗಿಡಗಳನ್ನು ಹಾಕಲು ಯೋಚಿಸುತ್ತಿದ್ದೇವೆ. ಬ್ರೆಜಿಲ್ ಮಾದರಿಯಲ್ಲಿ ರೋಬಸ್ಟಾ ಕಾಫಿ ಗಿಡಗಳನ್ನು ಹಾಕಲು ಸಿದ್ಧತೆ ಮಾಡಿಕೊಂಡಿದ್ದೇವೆ. ಸಾಲಿನಿಂದ ಸಾಲಿಗೆ 14 ಅಡಿ, ಗಿಡದಿಂದ ಗಿಡಕ್ಕೆ 4 ಅಡಿ ಅಂತರದಲ್ಲಿ ಗಿಡಗಳನ್ನು ಹಾಕಿದರೆ ತೋಟದಲ್ಲಿ ವಾಹನ ಓಡಾಡಲು, ಯಂತ್ರಗಳಿಂದ ಕೆಲಸ ಮಾಡಲು, ಕೊಯ್ಲು ಮಾಡಲು ಅನುಕೂಲವಾಗುತ್ತದೆ ಎಂದು ಹೇಳುವಾಗ ಎಂ.ಸಿ. ರಂಗಸ್ವಾಮಿಯವರ ಕೃಷಿಯ ಜ್ಞಾನ, ತೋಟದಲ್ಲಿ ಏನೇ ಮಾಡಬೇಕಾದರೂ ಚಿಂತಿಸಿ, ಯೋಜಿಸಿ ಮಾಡುವುದು ಎದ್ದು ಕಾಣುತ್ತಿತ್ತು.

**ಮಾರುಕಟ್ಟೆಗೆ ಹೋಗುವುದಿಲ್ಲ**

ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಮೆಣಸು, ಏಲಕ್ಕಿ, ಕೋಕೋ, ಅಡಿಕೆ, ತೆಂಗು, ಕಾಫಿ ಮತ್ತಿತರ ಬೆಳೆಗಳನ್ನು ಬೆಳೆಯುವ ಎಂ.ಸಿ. ರಂಗಸ್ವಾಮಿ ಎಂದೂ ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡುವುದಿಲ್ಲ.

ಬೆಂಗಳೂರಿನ ನೈಸರ್ಗಿಕ ಫಲದಾ ಸಂಸ್ಥೆಯವರು ಮತ್ತು ಬೇರೆ ವ್ಯಾಪಾರಿಗಳು ತೋಟಕ್ಕೇ ಬಂದು ಮಾಲನ್ನು ಖರೀದಿಸುತ್ತಾರೆ. ಒಳ್ಳೆಯ ಪದಾರ್ಥ ನಮ್ಮ ಬಳಿ ಇದೆ ಅಂತ ತಿಳಿದರೆ ವ್ಯಾಪಾರಸ್ಥರು ನಮ್ಮ ಬಳಿಯೇ ಬರುತ್ತಾರೆ ಎನ್ನುವುದು ಎಂ.ಸಿ. ರಂಗಸ್ವಾಮಿ ಅವರು ಕಂಡುಕೊಂಡಿರುವ ಸತ್ಯ.

ಅಡಿಕೆ, ತೆಂಗು, ಮೆಣಸು ಮತ್ತಿತರ ಗಿಡಗಳನ್ನು ತಾವೇ ಸ್ವತಃ ನರ್ಸರಿ ಮಾಡಿಕೊಳ್ಳುವ ಇವರು ಅಪರೂಪದ ಗಿಡಗಳನ್ನು ಮಾತ್ರ ಹೊರಗಿನಿಂದ ತರುತ್ತಾರೆ. ನಾವು ತೋಟಕ್ಕೆ ಹೋಗಿದ್ದಾಗ ಸಾವಿರಾರು ರಕ್ತಚಂದನ ಗಿಡಗಳನ್ನು ನೆಡಲು ತಯಾರಿ ನಡೆದಿತ್ತು. ಐದು ನೂರು ಎಕರೆ ಪ್ರದೇಶವನ್ನು ಜೀಪಿನಲ್ಲಿ ಸುತ್ತಾಡುತ್ತಾ ಪ್ರತಿ ಗಿಡಮರಗಳ

ಬಗ್ಗೆಯೂ ಅಕ್ಕರೆಯಿಂದ ವಿವರಣೆ ನೀಡಿದ ಎಂ.ಸಿ. ರಂಗಸ್ವಾಮಿ ಅವರ ಕೃಷಿ ಪ್ರೀತಿ ಮತ್ತು ಅವರ ಸರಳತೆ, ಸಜ್ಜನಿಕೆ ತದ್ರೂಪಿ ಕಾಡು ಬಿಟ್ಟು ಹೊರಬಂದರೂ ನಮ್ಮನ್ನು ಬಿಡದೆ ಬಹು ಕಾಲದವರೆಗೂ ಕಾಡುತ್ತಲೆ ಇತ್ತು.

ರಸ್ತೆ ದಾಟಿದ ನಮ್ಮ ಕಾರು ಗ್ರಾಮಗಳನ್ನು ಪ್ರವೇಶಿಸುತ್ತಿದ್ದಂತೆ ಅಲ್ಲಲ್ಲಿ "ಗಿಡ ಮರ ಬೆಳೆಸಿ ಕಾಡು ಉಳಿಸಿ" ಎಂಬ ಕೃಷಿ ಮತ್ತು ಅರಣ್ಯ ಇಲಾಖೆಯ ಗೋಡೆ ಬರಹಗಳು ಕಣ್ಣ ಮುಂದೆ ಹಾದು ಹೋದವು. ಪರಿಸರವಾದಿಗಳ ಭೀಕರ ಭಾಷಣಗಳು ನೆನಪಾದವು. ಯಾವುದೇ ಪ್ರಚಾರ, ಸನ್ಮಾನ, ಗೌರವಗಳಿಂದ ಹಿಗ್ಗದೆ, ಲಕ್ಷ ಲಕ್ಷ ಸಂಖ್ಯೆಯಲ್ಲಿ ಗಿಡಮರ ಬೆಳೆಸುತ್ತಿರುವ ಎಂ.ಸಿ. ರಂಗಸ್ವಾಮಿ ಅಂತಹವರ ಸಂತತಿ ಹೆಚ್ಚಾಗಲಿ. ನಾಡಿನ ಯುವಕರು ತದ್ರೂಪಿ ಕಾಡು ಬೆಳೆಸಲು ಮುಂದಾಗಲಿ ಎಂದುಕೊಂಡು ಭವ್ಯವಾದ ವನಸಿರಿಯನ್ನು ನೋಡಿದ ತೃಪ್ತಿಯೊಂದಿಗೆ ಹೊರಬಂದೆವು.

ಶ್ರೀಯುತರಿಗೆ ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಯವು 2023ನೇ ಸಾಲಿನಲ್ಲಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಿರುತ್ತದೆ. ಅಲ್ಲದೆ 2025ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿರುತ್ತಾರೆ. ಇವರು ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ಸದಸ್ಯರಾಗಿರುವುದು ನಮ್ಮ ಹೆಮ್ಮೆ. ಆಸಕ್ತರು ಡಾ. ಎಂ.ಸಿ. ರಂಗಸ್ವಾಮಿ ಇವರನ್ನು 9980126555 ಮೂಲಕ ಸಂಪರ್ಕಿಸಬಹುದು.

**ಲೇಖಕರ ಸಂಪರ್ಕಕ್ಕಾಗಿ:**
**ಮೊ: 9380477210**

# ರಾಷ್ಟ್ರೀಯ ಕೃಷಿಅರಣ್ಯ ನೀತಿ- 2014

**ಹೆಚ್.ಜಿ. ಶಿವಾನಂದಮೂರ್ತಿ**, ಭಾ.ಅ.ಸೇ (ನಿ)

ನವ ದೆಹಲಿಯಲ್ಲಿ ಫೆಬ್ರವರಿ 10, 2014ರಂದು ಜರುಗಿದ ವಿಶ್ವ ಕೃಷಿಅರಣ್ಯ ಸಮಾವೇಶದಲ್ಲಿ, ಭಾರತ ಸರ್ಕಾರವು ರಾಷ್ಟ್ರೀಯ ಕೃಷಿಅರಣ್ಯ ನೀತಿಯನ್ನು ಪ್ರಕಟಪಡಿಸಿತು. ಇದರಲ್ಲಿ ಒಂದೇ ಜಮೀನಿನಲ್ಲಿ ಮರಗಳು, ಬೆಳೆ ಮತ್ತು ಜಾನುವಾರು ಸಂವರ್ಧನೆಯನ್ನು ಸಂಯೋಜಿಸಿ ಬೆಳೆಸುವ ಪದ್ಧತಿಯನ್ನು ಜಾರಿಗೆ ತಂದಿತು. ಕೃಷಿಅರಣ್ಯ ನೀತಿಯಿಂದಾಗುವ ಲಾಭಗಳಾದ ಬರಡು ಭೂಮಿಯನ್ನು ಪುನಶ್ಚೇತನಗೊಳಿಸುವುದು, ಬಡತನ ನಿರ್ಮೂಲನೆ ಮತ್ತು ಆಹಾರದಲ್ಲಿಯ ಪೋಷಕಾಂಶಗಳ ಕೊರತೆಯನ್ನು ಇಳುವರಿ ಹೆಚ್ಚಿಗೆ ಮಾಡುವುದರ ಮುಖಾಂತರ ಪ್ರಾಣಿಗಳಿಗೆ ಆಹಾರ ಒದಗಿಸುವುದು, ಹರಿಯುವ ನೀರಿನ ಸಂರಕ್ಷಣೆ, ಜೀವವೈವಿಧ್ಯತೆಯ ಸಂರಕ್ಷಣೆ, ವನ್ಯಜೀವಿಗಳ ರಕ್ಷಣೆ ಮತ್ತು ಮಣ್ಣಿನ ಸವಕಳಿಯನ್ನು ತಪ್ಪಿಸಿ ಫಲವತ್ತತೆಯನ್ನು ಹೆಚ್ಚಿಸುವುದಾಗಿದೆ. ಈ ನೀತಿಯ ಕೃಷಿಯಲ್ಲಿ ಸುಸ್ಥಿರತೆಯನ್ನು ತರುವುದು, ಉತ್ಪಾದಕತೆಯನ್ನು ಹೆಚ್ಚಿಸುವುದರ ಮುಖಾಂತರ ಮತ್ತು ಹವಾಮಾನ ಬದಲಾವಣೆಯಿಂದ ಉಂಟಾಗುವ ಪರಿಣಾಮವನ್ನು ನಿಯಂತ್ರಿಸುವ ಗುರಿಯನ್ನು ಹೊಂದಿದೆ.

**ರಾಷ್ಟ್ರೀಯ ಕೃಷಿಅರಣ್ಯ ನೀತಿ 2014ರ ಗುರಿಗಳು ಈ ಕೆಳಗಿನಂತಿವೆ:**

ಅ) ಮರ ಬೆಳೆಯುವುದನ್ನು ಕೃಷಿಗೆ ಪೂರಕವಾಗಿ ಉತ್ತೇಜಿಸುವುದು, ಹೆಚ್ಚಿಸುವುದು ಮತ್ತು ಸಮಗ್ರ ಕೃಷಿ ಪದ್ಧತಿಯನ್ನು ಅನುಸರಿಸಿ, ಬೆಳೆಗಳು ಮತ್ತು ಉತ್ಪಾದನೆಯನ್ನು ಹೆಚ್ಚಿಸುವುದು, ಉದ್ಯೋಗ, ಆದಾಯ ಮತ್ತು ಗ್ರಾಮೀಣ ಭಾಗದ ಜನರ ಜೀವನ ಶೈಲಿಯನ್ನು, ಅದರಲ್ಲೂ ವಿಶೇಷವಾಗಿಸಣ್ಣ ರೈತರ ಜೀವನ ಮಟ್ಟವನ್ನು ಹೆಚ್ಚಿಸುವುದು.

ಆ) ಪರಿಸರ ಸಂರಕ್ಷಣೆ, ಪರಿಸರದಲ್ಲಿ ಸುಸ್ಥಿರತೆ ಮತ್ತು ಹವಾಮಾನ ವೈಪರೀತ್ಯಗಳನ್ನು ಕಡಿಮೆಗೊಳಿಸುವುದು ಹಾಗೂ ಹವಾಮಾನಕ್ಕೆ ಪೂರಕವಾದ ಬೆಳೆಗಳನ್ನು ಉತ್ತೇಜಿಸುವುದು.

ಇ) ಮರ ಆಧಾರಿತ ಕೈಗಾರಿಕೆಗಳಿಗೆ ಬೇಕಾದ ಕಚ್ಚಾವಸ್ತುಗಳ ಪೂರೈಕೆಯನ್ನು ಈಡೇರಿಸುವುದು ಮತ್ತು ಮರಮುಟ್ಟುಗಳ ಆಮದನ್ನು ಕಡಿಮೆಗೊಳಿಸಿ, ವಿದೇಶಿ ವಿನಿಮಯವನ್ನು ಉಳಿಸುವುದು.

ಈ) ಕೃಷಿಅರಣ್ಯದ ಉತ್ಪನ್ನಗಳಾದ ಉರುವಲು ಕಟ್ಟಿಗೆ, ಕಿರು ಅರಣ್ಯ ಉತ್ಪನ್ನಗಳು, ಸಣ್ಣ ಮರಮುಟ್ಟುಗಳನ್ನು ಗ್ರಾಮೀಣ ಮತ್ತು ಗಿರಿಜನರಿಗೆ ಪೂರೈಕೆ ಮಾಡುವುದರ ಮುಖಾಂತರ ನೈಸರ್ಗಿಕ ಅರಣ್ಯಗಳ ಮೇಲಿನ ಒತ್ತಡವನ್ನು ಕಡಿಮೆಗೊಳಿಸುವುದು.

ಉ) ಅರಣ್ಯಗಳನ್ನು ಹೆಚ್ಚಿಸುವುದು/ಮರಗಳ ಹೊದಿಕೆಯನ್ನು ಹೆಚ್ಚಿಸುವ ಗುರಿಯು ಒಂದಕ್ಕೊಂದು ಪೂರಕವಾಗಿದ್ದು, ಪರಿಸರದಲ್ಲಿ ಸುಸ್ಥಿರತೆ ಅದರಲ್ಲೂ ವಿಶೇಷವಾಗಿ ಹಲವು ಸೂಕ್ಷ್ಮ ಪ್ರದೇಶಗಳಲ್ಲಿ ಸುಸ್ಥಿರತೆಯನ್ನು ತರುವುದು.

ಊ) ಕೃಷಿಅರಣ್ಯದಲ್ಲಿ ಸಂಶೋಧನೆಮತ್ತು ಸಾಮರ್ಥ್ಯ ಅಭಿವೃದ್ಧಿ ಹೆಚ್ಚಿಸುವುದು ಮತ್ತು ಈ ಕಾರ್ಯವನ್ನು ಜನಾಂದೋಲನವನ್ನಾಗಿ ಪರಿವರ್ತಿಸಿ, ಅಸ್ತಿತ್ವದಲ್ಲಿರುವ ನೈಸರ್ಗಿಕ ಅರಣ್ಯಗಳ ಮೇಲಿನ ಒತ್ತಡವನ್ನು ಕಡಿಮೆಗೊಳಿಸುವ ಗುರಿಯನ್ನು ಹೊಂದಿದೆ.

ಕೃಷಿಅರಣ್ಯದಲ್ಲಿ ಬೆಳೆದ ಮರಗಳ ಕಟಾವು ಮತ್ತು ಸಾಗಾಣಿಕೆಯು ವಿವಿಧ ಇಲಾಖೆಗಳ ನಿಯಂತ್ರಣದಲ್ಲಿದೆ. ಅಂದರೆ ಅರಣ್ಯ, ಕಂದಾಯ ಮತ್ತು ಸ್ಥಳೀಯ ಸಂಸ್ಥೆಗಳ ನಿಯಂತ್ರಣದಲ್ಲಿರುವುದರಿಂದ ಖಾಸಗೀ ಜಮೀನುಗಳಲ್ಲಿ ಮರ ಬೆಳೆಯುವುದನ್ನು ನಿರುತ್ಸಾಹಗೊಳಿಸಿದಂತಾಗಿದೆ. ರಾಷ್ಟ್ರೀಯ ಕೃಷಿಅರಣ್ಯ ನೀತಿಯು ಸಾರ್ವಜನಿಕರು ಮರ ಬೆಳೆಯುವುದನ್ನು ಪ್ರೋತ್ಸಾಹಿಸಲು ಸುಲಭದ ಮಾರ್ಗಗಳನ್ನು ಅನುಸರಿಸಲು ಸೂಚಿಸಿದೆ. ಈ ನೀತಿಯಲ್ಲಿ ಬಹಳ ಸರಳ ವಿಧಾನಗಳನ್ನು ಅನುಸರಿಸಿ, ಅನುಮತಿಯನ್ನು ಯಾವುದೇ ಅಡೆತಡೆಯಿಲ್ಲದೆ, ಪಾರದರ್ಶಕ ರೀತಿಯಲ್ಲಿ ಮತ್ತು ಸಮಯದ ಮಿತಿಯೊಂದಿಗೆ ನೀಡಲು ಸಲಹೆ ನೀಡಿದೆ.

ಈ ನೀತಿಯು ವಿವಿಧ ಕೌಶಲ್ಯಗಳಾದ ಉತ್ತಮವಾದ ದತ್ತಾಂಶ ಮತ್ತು ಮಾಹಿತಿ ಅಭಿವೃದ್ಧಿ ಪಡಿಸುವುದು ಮತ್ತು ಸಂಶೋಧನೆಯಲ್ಲಿ ಹಣ ತೊಡಗಿಸುವುದು, ಪ್ರಚಾರ ಮತ್ತು ಸಾಮರ್ಥ್ಯ ಅಭಿವೃದ್ಧಿಯಲ್ಲಿ ಮತ್ತು ಇತರೆ ಸೇವೆಗಳು ರೈತರಿಗೆ ಸುಲಭವಾಗಿ ದೊರೆಯಲು, ಅಂದರೆ ಗುಣಮಟ್ಟದ ಸಸಿಗಳ ಲಭ್ಯತೆ, ಸಾಂಸ್ಥಿಕ ಹಣಕಾಸಿನ ನೆರವು ಮತ್ತು ಕೃಷಿಅರಣ್ಯಕ್ಕೆ ವಿಮೆ ಅಳವಡಿಸುವುದು, ಕೃಷಿಅರಣ್ಯದ ಉತ್ಪನ್ನಗಳನ್ನು ಬಳಸುತ್ತಿರುವ ಕೈಗಾರಿಕೆಗಳ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಸಹಕರಿಸುವುದು, ರೈತರುಗಳು ಬೆಳೆದಿರುವ ಮರದ ಉತ್ಪನ್ನಗಳ ಮಾರಾಟಕ್ಕೆ ಮಾರುಕಟ್ಟೆ ಒದಗಿಸಲು ಸಹಕರಿಸುವುದು, ಕೃಷಿಅರಣ್ಯವನ್ನು ಬೆಳೆದಿರುವುದಕ್ಕೆ ಪ್ರೋತ್ಸಾಹ ನೀಡುವುದು. ಸುಸ್ಥಿರ ಕೃಷಿಅರಣ್ಯವನ್ನು ಉತ್ತೇಜಿಸುವುದರೊಂದಿಗೆ ಉತ್ಪಾದನೆಗೆ ಬೇಕಾದ ಜೀವರಾಶಿಯನ್ನು (Biomas) ಒದಗಿಸುವುದಾಗಿದೆ.

# ಇರುವುದೊಂದೇ ಭೂಮಿ

ಆಯಿತು 50 ವರ್ಷ
ಸ್ಟಾಕ್ಹೋಮ್ 1972 ರ ಸಮಾವೇಶಕ್ಕೆ!
ಅಂದು ನೆನೆದ ನಾವು ಇಂದು
ಮತ್ತೆ ನೆನೆಯುತ್ತಿದ್ದೇವೆ
'ಇರುವುದೊಂದೇ ಭೂಮಿ' ಎಂದು!

ನಮ್ಮ ನಕ್ಷತ್ರ ಪುಂಜದಲಿ
ಇರುವುದೊಂದೇ ಭೂಮಿ
ಎಂದು ಹೇಳಲಾಗುತ್ತಿದೆ
ನಕ್ಷತ್ರ ಪುಂಜದ ಕಲ್ಪನೆ
ನನ್ನ ಅರ್ಥ ಗ್ರಹಿಕೆಗೆ ಮೀರಿದ್ದು
ಆದರೆ ನನಗೆ ಗೊತ್ತಿರುವುದು
ನಾ ಜನಿಸಿರುವ, ಬೆಳೆದಿರುವ
ಬದುಕುತಿರುವ ಈ ಭೂಮಿ ಮಾತ್ರ!
ಹಾಗಾಗಿ ನನಗಿರುವುದು 'ಒಂದೇ ಭೂಮಿ'!

ಎಲ್ಲ ಜೀವಿಗಳ ವಿಕಾಸದೊಂದಿಗೆ
ವಿಕಾಸ ಹೊಂದಿದ ಮಾನವ
ಬುದ್ದಿಯ ಪ್ರಬಲತೆಯಿಂದ
ಇಡೀ ಭೂಮಿಯನೇ ಕಬಳಿಸಿ
ಇತರೆಲ್ಲ ಜೀವಿಗಳಿಗೆ ಕಂಟಕಪ್ರಾಯನಾಗಿ
ತನ್ನ ಜೀವಕ್ಕೆ ತಾನೇ ಮಾರಕನಾಗಿ
ಹುಡುಕುತ್ತಿದ್ದಾನೆ ಬೇರೊಂದು ಸ್ಥಳವ! ಅನುಕೂಲವಾದರೆ
ಜಿಗಿಯಲು ತಯಾರಿ ನಡಿಸಿದ್ದಾನೆ ಬೇರೊಂದು ಗ್ರಹಕ್ಕೆ!

ಐನ್‌ಸ್ಟೈನ್ ಹೇಳಿದ ಮಾತು
ನೆನಪಿಗೆ ಬರುತ್ತಿದೆ

"ಎರಡು 'ಅನಂತ'ಗಳಿವೆ
ಒಂದು ಈ ವಿಶ್ವ
ಇನ್ನೊಂದು ಮಾನವನ ಮೂರ್ಖತನ
ಆದರೆ ವಿಶ್ವದ ಅನಂತತೆಯ
ಬಗ್ಗೆ ನನಗೆ ಖಚಿತವಿಲ್ಲ!"
ಎಷ್ಟು ಸರಿಯಾದ ಮಾತು!

ಈಗಲೂ ಅರಿವು ಮೂಡದಿದ್ದರೆ
"ಕ್ರೀ" ಜನಾಂಗದ ನಾಯಕ
ಬಂದ ಆಕ್ರಮಣಕಾರ ತೋರಿದ
ಹಣದ ಪ್ರಲೋಭನೆಗೆ ನೀಡಿದ ಉತ್ತರ
"ಗೆಳೆಯ ನಮ್ಮ ಕಾಡಿನ ಕೊನೆಯ
ಮರವನೂ ಉರುಳಿಸಿದ ಮೇಲೆ
ನದಿಯ ಕೊನೆಯ ಹನಿ ನೀರನ್ನೂ
ಕುಡಿದ ಮೇಲೆ
ಸಾಗರದ ಕೊನೆಯ ಮೀನನ್ನೂ
ಭಕ್ಷಿಸಿದ ಮೇಲೆ
ನಾವು ಡಾಲರ್ ನೋಟನ್ನು ತಿನ್ನೋಣವೇ?"
ಇದಾದರೂ ನಮ್ಮ ಕಣ್ಣು ತೆರೆಸೀತೆ?
ಅಭಿವೃದ್ಧಿ ಎಂಬ ನಾಗಾಲೋಟಕ್ಕೆ ಹಾಕೀತೆ ತಡೆ!
ಭುವಿಯೊಂದಿಗೆ ಸುಸ್ಥಿರವಾಗಿ
ಸಹಜೀವಿಗಳೊಂದಿಗೆ ಸಾಮರಸ್ಯದಿ
ಬದುಕುವುದ ಕಲಿಸೀತೆ?

**–ಡಾ. ಕೆ.ಹೆಚ್. ವಿನಯ್ ಕುಮಾರ್,**
ಭಾ.ಅ.ಸೇ (ನಿ)




**ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ 2026ರ ಪುರಸ್ಕೃತರಾದ ಪ್ರಗತಿಪರ ರೈತ ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕು ದೊಡ್ಡಮೊಗ್ಗೆಯ ಡಾ. ಎಂ.ಸಿ. ರಂಗಸ್ವಾಮಿ ಇವರನ್ನು ಸಂಸ್ಥೆಯ ವತಿಯಿಂದ ಗೌರವಿಸಲಾಯಿತು.**

# ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ಏಪ್ರಿಲ್–ಜೂನ್ 2026ರ ಮಾಹೆಗಳಲ್ಲಿ ನಡೆದ ಕಾರ್ಯಕ್ರಮಗಳು

1) ದಿನಾಂಕ: 17–04–2026 ರಂದು ಬೆಂಗಳೂರು ಹೂ ಬಿಡುವ ನಗರಿ ವಿಷಯದ ಕುರಿತಂತೆ ರಾಷ್ಟ್ರ ಮಟ್ಟದ ವಿಚಾರ ಸಂಕಿರಣವನ್ನು ನಡೆಸುವ ಕುರಿತಂತೆ ಚರ್ಚಿಸಲು ತಾಂತ್ರಿಕ ಮತ್ತು ಪ್ರಚಾರ ಉಪಸಮಿತಿ ಸಭೆಯನ್ನು ಕಾವೇರಿ ಅತಿಥಿ ಗೃಹ, ಹೆಬ್ಬಾಳ ಕೃಷಿ ವಿವಿ ಕ್ಯಾಂಪಸ್, ಬೆಂಗಳೂರು ಇಲ್ಲಿ ನಡೆಸಲಾಯಿತು.

2) ದಿನಾಂಕ: 21–04–2026 ರಂದು ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ವತಿಯಿಂದ ಸುಮಾರು 40 ಜನ ಸದಸ್ಯರನ್ನೊಳಗೊಂಡಂತೆ ಒಂದು ದಿನದ ಹಾಸನ ಕೃಷಿಅರಣ್ಯ ಪ್ರವಾಸವನ್ನು ನಡೆಸಲಾಯಿತು. ಸದಸ್ಯರಾದ ಶ್ರೀ ಹೆಚ್.ಪಿ. ಮೋಹನ್‌ರವರ ಮುಂದಾಳತ್ವದಲ್ಲಿ ಹಾಸನ ಜಿಲ್ಲೆಯ ರಾಯರಕೊಪ್ಪಲು ಗ್ರಾಮದಲ್ಲಿರುವ ಆಲೂರು ಕಾಫಿ ಬೆಳೆಗಾರರ ಸಂಘದ ಸಭೆಯಲ್ಲಿ ಭಾಗವಹಿಸಿ ಕೃಷಿಅರಣ್ಯ ನಿರ್ವಹಣೆ ಹಾಗೂ ಕೃಷಿ ಜಮೀನುಗಳಲ್ಲಿ ಬೆಳೆದ ಮರಗಳ ಕಡಿತಲೆ ಹಾಗೂ ಸಾಗಾಣಿಕೆಗೆ ಇರುವ ಸಮಸ್ಯೆಗಳ ಬಗ್ಗೆ ಸಮಾಲೋಚನೆ ನಡೆಸಲಾಯಿತು. ಕಂದಾಯ ದಾಖಲೆಯಾದ ಆರ್.ಟಿ.ಸಿ.ಯಲ್ಲಿ ಮರಗಳ ಸಂಖ್ಯೆ, ಜಾತಿ ನಮೂದಿಸುವುದು, ಕೃಷಿಅರಣ್ಯ ಉತ್ಪನ್ನಗಳಿಗೆ ಸಂಪೂರ್ಣ ಜಿ.ಎಸ್.ಟಿ. ವಿನಾಯತಿ ಪಡೆಯುವುದು, ಕೃಷಿ ಜಮೀನಿನಲ್ಲಿ ಬೆಳೆದ ಮರಗಳಿಗೆ ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆ–1976 ರ ಅಡಿಯಲ್ಲಿ ವಿನಾಯತಿ ನೀಡುವುದು, ಮಾನವ, ಆನೆ ಸಂಘರ್ಷ ಇತ್ಯಾದಿ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ನಂತರ ಆಲೂರಿನಲ್ಲಿರುವ ಶ್ರೀ ಹೆಚ್.ಪಿ. ಮೋಹನ್‌ರವರ ತೋಟಕ್ಕೆ ಭೇಟಿ ನೀಡಲಾಯಿತು. ಶ್ರಿಯುತರು ಕಾಫಿಯೊಂದಿಗೆ ಸಿಲ್ವರ್ ಮತ್ತು ಮೆಣಸು, ಕಾಫಿಯೊಂದಿಗೆ ತೇಗ ಮತ್ತು ಮೆಣಸು ಹಾಗೂ ಕಾಫಿಯೊಂದಿಗೆ ಶ್ರೀಗಂಧ, ವಿಶೇಷವಾಗಿ ಬೆಳೆಯಲಾಗಿರುವ ನೀಲಗಿರಿಯೊಂದಿಗೆ ಕಾಫಿ ಮತ್ತು ಮೆಣಸು ಬೆಳೆಯ ಬಗ್ಗೆ ಅವರೊಂದಿಗೆ ಚರ್ಚಿಸಲಾಯಿತು. ನಂತರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ 2026ರ ಪುರಸ್ಕೃತರಾದ ಪ್ರಗತಿಪರ ರೈತರಾದ ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕು ದೊಡ್ಡಮೊಗ್ಗೆಯ ಡಾ. ಎಂ.ಸಿ. ರಂಗಸ್ವಾಮಿ ಇವರನ್ನು ಸಂಸ್ಥೆಯ ವತಿಯಿಂದ ಗೌರವಿಸಲಾಯಿತು.

3) ದಿನಾಂಕ: 29–05–2026 ರಂದು ಕಾರ್ಯಕಾರಿ ಸಮಿತಿ ಸಭೆಯನ್ನು ತೋಟಗಾರಿಕಾ ಕಾಲೇಜು, ಬೆಂಗಳೂರು ಇಲ್ಲಿ ನಡೆಸಲಾಯಿತು. ಕರ್ನಾಟಕ ದೂರ ಸಂವೇದಿ ಅನ್ವಯಿಕ ಕೇಂದ್ರ ಹಾಗೂ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಪಡೆದುಕೊಳ್ಳಲಾಯಿತು.

4) ದಿನಾಂಕ: 29–05–2026 ರಂದು ಸಂಸ್ಥೆಯ ತ್ರೈಮಾಸಿಕ ವಾರ್ತಾಪತ್ರ 'ಕೃಷಿವನ' ಜನವರಿ–ಮಾರ್ಚ್ 2026 ನ್ನು ಡಾ. ರಾಮಚಂದ್ರ ನಾಯ್ಕ, ಡೀನ್, ತೋಟಗಾರಿಕಾ ಕಾಲೇಜು, ಬೆಂಗಳೂರು ಇವರಿಂದ ಬಿಡುಗಡೆ ಮಾಡಿಸಲಾಯಿತು.

5) ದಿನಾಂಕ: 05–06–2026 ರಂದು ಕೃಷಿ ತಂತ್ರಜ್ಞರ ಸಂಸ್ಥೆ, ಬೆಂಗಳೂರಿನ ಸಹಯೋಗದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಕೃಷಿ ತಂತ್ರಜ್ಞರ ಸಂಸ್ಥೆ, ಕ್ವೀನ್ಸ್ ರಸ್ತೆ, ಬೆಂಗಳೂರಿನಲ್ಲಿ ಆಚರಿಸಲಾಯಿತು.

6) ದಿನಾಂಕ: 22–06–2026 ರಂದು ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರಾದ ಶ್ರೀ ಹೆಚ್. ಶಶಿಧರ ಶೆಟ್ಟಿ ಇವರು ಸಂಸ್ಥೆಗೆ ಭೇಟಿ ನೀಡಿ, ಕರ್ನಾಟಕ ರಾಜ್ಯಾದ್ಯಂತ ಐದು ಕೋಟಿ ಗಿಡಗಳನ್ನು ನೆಡುವ ಕುರಿತಂತೆ ಸಂಸ್ಥೆಯ ಭಾಗವಹಿಸುವಿಕೆಯ ಕುರಿತಂತೆ ಚರ್ಚಿಸಲಾಯಿತು.

7) ದಿನಾಂಕ: 23–06–2026 ರಂದು ಆಜೀವ ಸದಸ್ಯರಾದ ನಾಗದಾಸನಹಳ್ಳಿಯ ಡಾ. ಎನ್.ಸಿ. ಪಟೇಲ್ ರವರ ಆಹ್ವಾನದ ಮೇರೆಗೆ ಶ್ರೀಯುತ ನೇರಳೆ ತೋಟಕ್ಕೆ ಸಂಸ್ಥೆಯ ಸದಸ್ಯರು ಭೇಟಿ ನೀಡಿ ಕೃಷಿಅರಣ್ಯದಲ್ಲಿ ನೇರಳೆ ಬೆಳೆಯ ಕುರಿತು ಚರ್ಚಿಸಲಾಯಿತು.

– ಕಾರ್ಯದರ್ಶಿಗಳು



**ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರಾದ ಶ್ರೀ ಹೆಚ್. ಶಶಿಧರ ಶೆಟ್ಟಿ ಇವರಿಗೆ ಕೃಷಿಅರಣ್ಯ ರೈತರ ಆಶಾಕಿರಣ ವಿಶೇಷ ಸಂಚಿಕೆಯನ್ನು ನೀಡಲಾಯಿತು.**

MSIL ಚಿಟ್ಸ್




**ವೈಶಿಷ್ಟ್ಯಗಳು**
- ವಿಶ್ವಾಸಾರ್ಹ ಸರ್ಕಾರಿ ಸಂಸ್ಥೆ
- ಪಾರದರ್ಶಕ ಕಾರ್ಯಾಚರಣೆ
- ಸುಲಭ ಹಣದ ಲಭ್ಯತೆ
- ಆಕರ್ಷಕ ಗಳಿಕೆಯ ಅವಕಾಶ
- ತೊಡಗಿಸಿದ ಹಣಕ್ಕೆ ಭದ್ರತೆ

ಹೊಸ ಚಿಟ್‌ಗಳಿಗೆ ನೋಂದಣಿ ಪ್ರಾರಂಭ

**ಹಣಕಾಸಿನ ಅಗತ್ಯಗಳಿಗೆ ತಕ್ಕಂತೆ ಎಂಎಸ್‌ಐಎಲ್‌ನಲ್ಲಿ ಅನೇಕ ಚಿಟ್ ಯೋಜನೆಗಳು ಲಭ್ಯವಿದೆ.**
**ನೀವೂ ಕೂಡ ನಿಮ್ಮ ಅಗತ್ಯಗಳಿಗೆ ಸರಿಯಾದ ಚಿಟ್ ಯೋಜನೆಗಳಲ್ಲಿ ನೊಂದಾಯಿಸಿ.**

| ಮಾಸಿಕ ಚಂದಾ (ರೂ.) | ಅವಧಿ (ತಿಂಗಳು) | ಚಿಟ್ ಮೌಲ್ಯ (ರೂ.) |
|---|---|---|
| 2500 | 40 | 1 Lakh |
| 5000 | 40 | 2 Lakhs |
| 10000 | 40 | 4 Lakhs |
| 10000 | 50 | 5 Lakhs |
| 12500 | 40 | 5 Lakhs |
| 15000 | 40 | 6 Lakhs |
| 10000 | 60 | 6 Lakhs |
| 15000 | 60 | 9 Lakhs |
| 25000 | 40 | 10 Lakhs |

| ಮಾಸಿಕ ಚಂದಾ (ರೂ.) | ಅವಧಿ (ತಿಂಗಳು) | ಚಿಟ್ ಮೌಲ್ಯ (ರೂ.) |
|---|---|---|
| 10000 | 100 | 10 Lakh |
| 15000 | 100 | 15 Lakhs |
| 25000 | 60 | 15 Lakhs |
| 25000 | 100 | 25 Lakhs |
| 50000 | 50 | 25 Lakhs |
| 50000 | 100 | 50 Lakhs |
| 100000 | 50 | 50 Lakhs |
| 200000 | 50 | 1 Crore |
| 250000 | 40 | 1 Crore |

ಎಂಎಸ್‌ಐಎಲ್ ಚಿಟ್ ಫಂಡ್ಸ್ ಶಾಖಾ ಕಚೇರಿಗಳು: ■ ಕನ್ನಿಂಗ್‌ಹ್ಯಾಂ ರಸ್ತೆ: 080-22353068 ಮೊ: 9844720963 ■ ವಿಲ್ಸನ್‌ಗಾರ್ಡನ್: ಮೊ: 8722804212 / 6366763395 ■ ಗಾಂಧಿನಗರ: 080-22204021 ಮೊ: 8722804211 ■ ಚಾಮರಾಜಪೇಟೆ: 080-26704747 ಮೊ: 9844135701 ■ ರಾಜಾಜಿನಗರ: 080-23429525 ಮೊ: 9844133535 ■ ಜಯನಗರ: ಮೊ: 9844895975 / 6366971099 ■ ವಿಜಯನಗರ: 080-23151243 ಮೊ: 9844895974 ■ ಮಲ್ಲೇಶ್ವರಂ: 080-23465454 ಮೊ: 9844787398 ■ ಯಶವಂತಪುರ: 080-23574622 ಮೊ: 9844895973 ■ ಬಸವನಗುಡಿ: 080-26622638 ಮೊ: 8970867865 ■ ಬಿ.ಟಿ.ಎಂ. ಲೇಔಟ್: ಮೊ: 8970867863 / 8088964848 ■ ಆರ್.ಟಿ. ನಗರ: 080-23558866 ಮೊ: 6366971098 ■ ಇಂದಿರಾನಗರ: 080-48534907 ಮೊ: 9844636704 ■ ಯಲಹಂಕ: 080-28460366 ಮೊ: 8970867862 ■ ಬನಶಂಕರಿ: 080-26699563 ಮೊ: 9844890314 ■ ಮೈಸೂರು: 0821-2344100 ಮೊ: 9164000116 ■ ಹುಬ್ಬಳ್ಳಿ: 0836-2358581 ಮೊ: 9164000373 ■ ತುಮಕೂರು: 0816-2956582 ಮೊ: 9844890315 ■ ಮಂಗಳೂರು: 0824-2495669 ಮೊ: 9844434355 ■ ದಾವಣಗೆರೆ: 08192-233493 ಮೊ: 9164000168 ■ ಕಲಬುರಗಿ: 08472-250323 ಮೊ: 9164000230 ■ ಬೆಳಗಾವಿ: 0831-2474682 ಮೊ: 9164003973 ■ ಕೋಲಾರ: 08152-226621 ಮೊ: 7353124100 ■ ಚಿಕ್ಕಬಳ್ಳಾಪುರ: 08156-275077 ■ ಶಿವಮೊಗ್ಗ: 08182-270716 ಮೊ: 6366450106 ■ ಕೆಂಗೇರಿ: 080-2848 7228 ಮೊ: 6366946355 ■ ಚಾಮರಾಜನಗರ : ಮೊ: 9945141706/08226-225080

ಇ–ಮೇಲ್ : msil.chitfund@msilonline.com
ಭೇಟಿ ನೀಡಿ: www.msilchits.com

MSIL ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್


@MSILonline

# ರೈತರು ಶ್ರೀಗಂಧದ ಮರಗಳನ್ನು

## ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್‌ಗೆ

# ಸಂಸ್ಥೆಯು ನಿಗದಿಪಡಿಸಿದ ದರದಲ್ಲಿ

## ಸರಬರಾಜು / ಮಾರಾಟ ಮಾಡುವುದು





ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್ ಸಂಸ್ಥೆಯು ಕರ್ನಾಟಕ ಸರ್ಕಾರದ ಉದ್ಯಮವಾಗಿದ್ದು, ಸದರಿ ಕಾರ್ಖಾನೆಯು ವಿಶ್ವವಿಖ್ಯಾತ ಮೈಸೂರು ಸ್ಯಾಂಡಲ್ ಸೋಪ್ ಸೇರಿದಂತೆ **ಸುಮಾರು 38 ಉತ್ಪನ್ನಗಳನ್ನು ಉತ್ಪಾದಿಸುತ್ತಿದ್ದು, ಕಂಪನಿಗೆ ಮಾಸಿಕ ಸರಾಸರಿ 600 ಕೆಜಿ ಶ್ರೀಗಂಧದೆಣ್ಣೆ ಹಾಗೂ ವರ್ಷಕ್ಕೆ ಸುಮಾರು 150 ಮೆಟ್ರಿಕ್ ಟನ್‌ಗಳಷ್ಟು ಶ್ರೀಗಂಧದ ಚೇಗು ಮತ್ತು ಬೇರು [Heart-wood & roots] ಅವಶ್ಯಕತೆಯಿರುತ್ತದೆ.** ದೇಶದಾದ್ಯಂತ ಶ್ರೀಗಂಧ ಬೆಳೆಯುವ ಬೆಳೆಗಾರರು ತಮ್ಮ ಜಮೀನು ಅಥವಾ ನಿವೇಶನದಲ್ಲಿ **ಸರಾಸರಿ 20 ವರ್ಷ ಮೇಲ್ಪಟ್ಟ ಶ್ರೀಗಂಧದ ಮರಗಳಿದ್ದಲ್ಲಿ** ಪ್ರಸಕ್ತ ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆ / ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್ ದರದಲ್ಲಿ ಮಾರಾಟ ಮಾಡಲು ಇಚ್ಛಿಸಿದ್ದಲ್ಲಿ **ಕಾರ್ಖಾನೆಯೊಡನೆ ಒಡಂಬಡಿಕೆ** ಮಾಡಿಕೊಂಡು, ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್ ಸಂಸ್ಥೆಗೆ ಮಾರಾಟ ಮಾಡಲು ಕೋರಲಾಗಿದೆ.

ಸಹಿ/- ಸಹಾಯಕ ವ್ಯವಸ್ಥಾಪಕರು
ಸಂಶೋಧನೆ ಮತ್ತು ಅಭಿವೃದ್ಧಿ / ಶ್ರೀಗಂಧ ವಿಭಾಗ




**ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ**

**080-22164827, 9945405396**